MR. DEPUTY SPEAKER : The question is :

SRI H. D. DEVE GOWDA : Sir, before you put the motion to the vote of the House I want to make a statement.

ಇವತ್ತು ಏನೊಂದು ಈ ವಿಧೇಯಕವನ್ನು ತಂದು ಸಂಖ್ಯಾಬಲದ ಆಧಾರದ ಮೇಲೆ ಪಾಸ ಮಾಡಿಕೊಳ್ಳತಕ್ಕಂತಹ ಉದ್ಧಟತನದ ಹವ್ಯಾಸಕ್ಕೆ ಹೊರಟಿದ್ದೀರಿ ಆದರಿಂದ ನೌಕರರು ಕೋರ್ಟಿಗೆ ಹೋಗಿ ನ್ಯಾಯ ಪಡೆಯುವುದಕ್ಕೆ ತಡೆ ಹಾಕಿದ್ದೀರಿ. ಇಂಥ ಕರಾಳ ಶಾಸನ ತರುವ ಸರ್ಕಾರದ ನೀತಿಯ ವಿರುದ್ಧ ಪ್ರತಿಭಟನೆ ಮಾಡಿ ನಾವು ಸಭಾತ್ಯಾಗವನ್ನು ಮಾಡುತ್ತೇವೆ.

MR. DEPUTY SPEAKER :—The question is :

"That the Mysore State Civil Services (Regulation of promotion, pay and pension) Bill, 1973, be passed."

The Motion was adopted and the Bill was passed.

MYSORE STATE AGRICULTURAL UNIVERSITIES BILL, 1973, MOTION TO CONSIDER.

SRI K. H. PATIL :—(Minister for Agriculture and Forests) : Sir, I beg to move :—

"That the Mysore State Agricultural Universities Bill, 1973, be taken into consideration.

MR. DEPUTY SPEAKER :—Motion moved :—

"That the Mysore State Agricultural Universities Bill, 1973, be taken into consideration"

ಶ್ರೀ ಕೆ. ಎಚ್. ಪಾಟೀಲ್ :—ಮಾನ್ಯ ಸಭಾಪತಿಗಳೆ, ಇಂದು ಮೈಸೂರು ರಾಜ್ಯದ ಅಗ್ರಿಕಲ್ಚರಲ್ ಯುನಿವರ್ಸಿಟಿ ಬಿಲ್ಲನ್ನು ಈ ಸದನದಲ್ಲಿ ಮಂಡಿಸುವುದಕ್ಕೆ ಸಂತೋಷ ಮತ್ತು ಅಭಿಮಾನ ಪಡುತ್ತೇನೆ. ಕೆಲವು ದಿವಸಗಳ ಹಿಂದೆ ಬಿಲ್ಲನ್ನು ಸರಿಯಾದ ರೀತಿಯಲ್ಲಿ ಓದಲಾರದೆ ಅಥವಾ ಸರ್ಕಾರದ ಅಭಿಪ್ರಾಯವೇನೆಂಬು

(ಶ್ರೀ ಕೆ. ಎಚ್. ಪಾಟೀಲ್)

ದನ್ನು ತಿಳಿಯದೆ ಕೆಲವು ಸದಸ್ಯರು ಈ ಬಿಲ್ಲನ್ನು ಪ್ರತಿಭಟಿಸಿದರು. ಅದಲ್ಲದೆ ಅನೇಕ ರೀತಿಯ ಕಟ್ಟು ಕತೆಗಳನ್ನು ಕಟ್ಟಿ ಈ ಬಿಲ್ಲಿನ ಬಗ್ಗೆ ನನ್ನ ಮೇಲೆ ಉಗ್ರವಾದ ಟೀಕೆಗಳನ್ನು ಈ ಮನೆಯ ಹೊರಗೂ ಮತ್ತು ಒಳಗೂ ಮಾಡಲಾಯಿತು. ನಾನು ಮಾನ್ಯ ಸದಸ್ಯರುಗಳಿಗೆ ನಿಜವಾದ ರೀತಿಯಲ್ಲಿ ಇವುಗಳನ್ನು ಮುದ್ರಿಸಿ ಕೊಟ್ಟಿದ್ದರೆ ಈ ಪ್ರವಾದ ಆಗುತ್ತಾ ಇರಲಿಲ್ಲವೆಂದು ಕಾಣುತ್ತದೆ. ನಮ್ಮ ಶಾಸನವನ್ನು ಇಂಗ್ಲೀಷ್ ಭಾಷೆಯಲ್ಲಿ ಡ್ರಾಫ್ಟ್ ಮಾಡಿರುವುದರಿಂದ ಮತ್ತು ಅದನ್ನು ತರ್ಜುಮೆಗೊಳಿಸುವುದಕ್ಕೆ ಬೇಕಾದಂತಹ ಪರಿಣತರ ಅಭಾವವಿರುವುದರಿಂದ ಕೆಲವು ದಿವಸ ತೊಂದರೆಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :—ನಿಮಗೆ ಟ್ರಾನ್ಸ್‌ಲೇಟ್ ಮಾಡುವುದಕ್ಕೆ ಎಷ್ಟು ಜನ ಬೇಕು ?

ಶ್ರೀ ಕೋಣಂದೂರು ಲಿಂಗಪ್ಪ:—ನಿಮ್ಮ ಅಂಡರ ಸೆಕ್ರೆಟರಿಗಳಲ್ಲಿ ತರ್ಜುಮೆ ಮಾಡುವವರು ಇದ್ದಾರೆ.

ಶ್ರೀ ಕೆ. ಎಚ್. ಪಾಟೀಲ್ :—ಈಗ ಇದ್ದಂತಹ ಆಕ್ಟ್ ಏನಿದೆ, ಅದರಲ್ಲಿ ಆಗಿರುವಂತಹ ಬದಲಾವಣೆಗಳನ್ನು ಮತ್ತು ಅದರಲ್ಲಿ ಆಗುವಂತಹ ಸುಧಾರಣೆಗಳು ಏನೆಂಬುದನ್ನು ನಾನು ಸ್ಪಷ್ಟವಾಗಿ ಮಾನ್ಯ ಸದಸ್ಯರ ಗಮನಕ್ಕೆ ತಂದಿದ್ದರೆ ನನ್ನ ಮೇಲೆ ಯಾವ ದೋಷಾರೋಪಣೆಯನ್ನು ಮಾಡುತ್ತಾ ಇರಲಿಲ್ಲವೆಂದು ತಿಳಿಯುತ್ತೇನೆ. ಕೆಲವು ಪತ್ರಿಕಾಕರ್ತರು ನನ್ನ ಹತ್ತಿರ ಬಂದು ಕೆಲವು ಪ್ರಶ್ನೆಗಳನ್ನು ಕೇಳಿದರು. ಅದಕ್ಕೆ ನಾನು ಈ ಸದನದಲ್ಲಿಯೇ ಹೇಳಬೇಕಲ್ಲದೆ, ಪತ್ರಿಕಾಕರ್ತರಿಗೆ ಹೇಳಬಾರದು ಎಂದು ಸುಮ್ಮನೆ ಕೂತಿದ್ದೆ. ಅದೇನೆಂದರೆ ಕೆ. ಎಚ್. ಪಾಟೀಲರೇ ಇದನ್ನು ಡ್ರಾಫ್ಟ್ ಮಾಡಿದ್ದಾರೆ; ಲಾ ಡಿಪಾರ್ಟ್‌ಮೆಂಟಿಗೆ ಸಹ ಇದು ಹೋಗಿಲ್ಲ ಮತ್ತು ತಜ್ಞರನ್ನು ಸಹ ಕನ್‌ಸಲ್ಟ್ ಮಾಡಿಲ್ಲವೆಂದು ಕೆಲವರು ಹೇಳಿದ್ದಾರೆ. ಕೇವಲ ಧಾರವಾಡದಲ್ಲಿ ಒಂದು ಯೂನಿವರ್ಸಿಟಿ ಮಾಡುವ ಉದ್ದೇಶದಿಂದ ಯಾರನ್ನೂ ಕನ್‌ಸಲ್ಟ್ ಮಾಡದೆ ಈ ರೀತಿ ಮಾಡಿದ್ದಾರೆಂದು ಟೀಕೆ ಮಾಡಿದ್ದಾರೆ. ಹಾಗೆ ಹೇಳುವ ಮಾನ್ಯ ಸದಸ್ಯರ ಅಭಿಪ್ರಾಯ ತಪ್ಪು ಎಂದು ಹೇಳುವುದಕ್ಕಿಂತ ಅವರು ನನ್ನನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೆಂದು ಹೇಳುತ್ತೇನೆ. ಒಕ್ಕಲುತನದ ಸಚಿವನಾಗಿ ನಾನು ನೇರವಾಗಿ ಬಿಲ್ಲನ್ನು ತಂದರೂ ಸಹ ತಪ್ಪಾಗುವುದಿಲ್ಲ. ಆದರೆ ನಾನು ಆ ರೀತಿ ಮಾಡುವುದಿಲ್ಲ. ಅಧಿಕಾರಕ್ಕೆ ಬಂದಂದಿನಿಂದ ಇಂದಿನ ತನಕ ಅಗ್ರಿಕಲ್ಚರಲ್ ಯೂನಿವರ್ಸಿಟಿಯಾದರೆ ಅದಕ್ಕೆ ಹೇರಳವಾದ ಹಣ ಖರ್ಚಾಗುತ್ತದೆ ಎಂದು ಕೆಲವರು ಹೇಳಿದ್ದಾರೆ. ಕೆಲವರು ಇಲ್ಲಿಯ ಹಣವನ್ನು ತೆಗೆದುಕೊಂಡು ಹೋಗಿ ಧಾರವಾಡಕ್ಕೆ ಸುರಿಯುತ್ತಿದ್ದಾರೆಂದು ಹೇಳಿದರು.

ಧಾರವಾಡದಲ್ಲಿ ಯೂನಿವರ್ಸಿಟಿಯಾಗುವ ಪೂರ್ವದಲ್ಲಿಯೇ ಎಲ್ಲ ಸೌಕರ್ಯಗಳಿಂದ ಕೂಡಿದ ಯೂನಿವರ್ಸಿಟಿ ಪ್ರಿಮಿಸಸ್ ರೆಡಿಯಾಗಿ ನಿಂತಿದೆ. ಅಲ್ಲಿರತಕ್ಕಂತಹ ಸುತ್ತು ಮುತ್ತಲಿನ ಜಮೀನು ಮತ್ತು ವ್ಯಾಸಂಗಕ್ಕೆ ಅರ್ಹವಾದ ವಾತಾವಾರಣ ಯೂನಿವರ್ಸಿಟಿ ಸ್ಥಾಪನೆಗೆ ಯೋಗ್ಯವಾಗಿದೆ. ಇದು ಐ. ಎ. ಆರ್. ನವರ ಒಪ್ಪಿಗೆಯನ್ನು ಸಹ ಪಡೆದಿದೆ. ಈ ಅಗ್ರಿಕಲ್ಚರಲ್ ಯೂನಿವರ್ಸಿಟಿ ರೈತನ ಸುಧಾರಣೆಗೋಸ್ಕರ ಮತ್ತು ಅವನಿಗೆ ಬೇಕಾಗುವಂತಹ ಸಲಕರಣೆ ಒದಗಿಸುವ ರಿಸರ್ಚಿಗಾಗಿ ಹೆಚ್ಚಿನ ಕೆಲಸವನ್ನು ಮಾಡಬೇಕಾಗಿದೆ. ನಾವು ಭಾರತಾದ್ಯಂತ ನೋಡಿದಾಗ ಮತ್ತು ಮಹಾರಾಷ್ಟ್ರವನ್ನು ತುಲನೆ ಮಾಡಿ ನೋಡಿದಾಗ ನಾವು ಅಷ್ಟು ಪ್ರಗತಿಯನ್ನು ಸಾಧನೆ ಮಾಡಿಲ್ಲ. ಇವೊತ್ತಿನ ದಿವಸ ರೈತರಿಗೆ ಬೇಕಾಗುವ ಬೇರೆ ಕಡೆಗಳಲ್ಲಿ 4-5 ಅಗ್ರಿಕಲ್ಚರಲ್ ಯೂನಿವರ್ಸಿಟಿಗಳನ್ನು ಮಾಡಿರುವಾಗ ನಮ್ಮಲ್ಲಿ ಒಂದು ಯೂನಿವರ್ಸಿಟಿ ಸಹ ಹೆಚ್ಚು ಆಗುತ್ತಾ ಇಲ್ಲ. ಹಾಗಿದ್ದರೆ ಒಂದು ಯೂನಿವರ್ಸಿಟಿ ಇದ್ದರೆ ಸಾಲದೇ ಎಂದು ಕೆಲವರು ಪ್ರಶ್ನೆ ಮಾಡಬಹುದು. ಆದರೆ ಒಂದು ಯೂನಿನರ್ಸಿಟಿ ಮಾಡಿದರೆ ಅದರಲ್ಲಿ ರಿಸರ್ಚ್ ಇರಬೇಕಾಗುತ್ತದೆ, ಮತ್ತು ಕೆಲವು ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್ಸ್ ಇರಬೇಕಾಗುತ್ತದೆ. ಅವರು ನಿಮಿಷ ನಿಮಿಷಕ್ಕೂ ಸಲಹೆಯನ್ನು ಕೊಡಬೇಕಾಗುತ್ತದೆ. ಬೆಂಗಳೂರು ಅಗ್ರಿಕಲ್ಚರಲ್ ವಿಶ್ವವಿದ್ಯಾನಿಲಯದಲ್ಲಿ ಹಾರ್ಟಿಕಲ್ಚರ್ ವಿಭಾಗವನ್ನು ಮಾಡುವುದಕ್ಕಾಗಲಿಲ್ಲ. ಮಂಗಳೂರಿನ ಫಿಶರೀಸ್ ಕಾಲೇಜು ಭವ್ಯವಾಗಿ ಬೆಳೆದು ಬರಬೇಕೆಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ಅದೇ ರೀತಿಯಲ್ಲಿ ರಾಯಚೂರಿನಲ್ಲಿರುವ ಪಾಲಿಟೆಕ್ನಿಕ್ಕನ್ನು ಇಂಜನಿಯರಿಂಗ್ ಕಾಲೇಜಾಗಿ ಮಾಡಬೇಕೆಂದು ಪ್ರಯತ್ನ ನಡೆದಿದೆ. ಹಾಗೆಯೇ ಫಾರೆಸ್ಟ್ರೀ ಕಾಲೇಜು ಮತ್ತು ಹೋಂ ಸಯನ್ಸ್ ಕಾಲೇಜು ಮಾಡಬೇಕೆಂದು ಇದೆ. ಇವೆಲ್ಲಕ್ಕೂ ಅಗ್ರಿಕಲ್ಚರಲ್ ಯೂನಿವರ್ಸಿಟಿಯ ಬೆಳವಣಿಗೆಗೆ ಲಕ್ಷ್ಯ ಕೊಡದಿದ್ದರೆ ಸಾಧ್ಯವಾಗುವುದಿಲ್ಲ. ಅಗ್ರಿಕಲ್ಚರಲ್ ಯೂನಿವರ್ಸಿಟಿ ರಿಸರ್ಚಿಗೆ ಬೇಕಾಗುವ ಸಂಪೂರ್ಣ ಹಣ ಐ. ಸಿ. ಎ. ಆರ್. ನವರು ಕೊಡುತ್ತಾರೆ. ನಾವು ಅದಕ್ಕೆ ಬೇಕಾದಂತಹ ಸ್ಕೀಮನ್ನು ಕಳುಹಿಸುತ್ತಾ ಇಲ್ಲವೆಂದು ಹೇಳುತ್ತಿದ್ದಾರೆ. ಇಷ್ಟು ದಿವಸ ನಮ್ಮ ಮೈಸೂರು ರಾಜ್ಯ ಎಲ್ಲದರಲ್ಲಿಯೂ ಪ್ರಗತಿ ಪಡೆದಿದ್ದರೂ, ಇವತ್ತು ಕಾಟನ್ ರಿಸರ್ಚ ಲ್ಯಾಬೊರೇಟರಿ ನಮ್ಮಲ್ಲಿ ಇಲ್ಲ. ಹತ್ತಿಯ ಯೋಗ್ಯತೆಯನ್ನು ನೋಡಿ ಅದರ ಸ್ಟ್ರೆಂತ್, ಲೆಂತ್ ಇತ್ಯಾದಿಗಳನ್ನು ಸೈಂಟಿಫಿಕಾಗಿ ನೋಡಬೇಕಾದರೆ ನಾವು ನಮ್ಮ ಹತ್ತಿಯನ್ನು ಲ್ಯಾಬೊರೇಟರಿಗೆ ಕಳುಹಿಸಬೇಕಾಗುತ್ತದೆ. ಮಟ್ಟುಂಗ್ ಲ್ಯಾಬೊರೇಟರಿಯಲ್ಲಿ ನಮ್ಮ ಹತ್ತಿ ಬಹಳ ಉತ್ತಮವಾದುದು ಎಂದು ಹೇಳುತ್ತಿದ್ದಾರೆ. ಅದ್ದರಿಂದ ಇವತ್ತು ಯೂನಿವರ್ಸಿಟಿಯ ಅವಶ್ಯಕತೆ ಬಹಳ ಇದೆ. ಪ್ರತಿಯೊಬ್ಬ ರೈತನ ಮನೆ ಮನೆಗೂ ಮುಟ್ಟುವಂತಹ ರೀತಿಯಲ್ಲಿ ಈ ಕೇಂದ್ರಗಳು ಕೆಲಸ ಮಾಡಬೇಕಾಗಿದೆ. ಇವತ್ತು ಗುಲ್ಬರ್ಗಕ್ಕೆ ಬೇಕಾದಂತ ಬೇಳೆಕಾಳು ಬೆಳೆಯಬೇಕಾದರೆ ಅದಕ್ಕ ಬೇಕಾಗುವಂತಹ ರಿಸರ್ಚ ಮಾಡಬೇ

(ಶ್ರೀ ಕೆ. ಹೆಚ್. ಪಾಟೀಲ್)

ಕಾಗುತ್ತದೆ. ಅದರ ಬಗ್ಗೆ ಯೂನಿವರ್ಸಿಟಿಯವರು ಕಣ್ಣು ತೆರೆಯುತ್ತಾ ಇಲ್ಲ. ಇಲ್ಲಿ ಹಾರ್ಟಿಕಲ್ಚರ್ ಬಗ್ಗೆ ಇನ್ನೂ ಸುಧಾರಣೆಯಾಗಬೇಕಾಗಿದೆ. ಶ್ರೀಮಾನ್ ಮರಿಗೌಡರ ಶ್ರಮದಿಂದ ಹೆಚ್ಚು ಕೆಲಸ ನಡೆದಿದ್ದರೂ ಸಮೃದ್ಧಿಯಾಗಿ ರೈತರಿಗೆ ಲಾಭದಾಯಕವಾಗುವಂತಹ ಬದಲಾವಣೆ ಮಾಡಿ, ವಸ್ತುಗಳನ್ನು ಯಾವ ರೀತಿ ಯಲ್ಲಿ ರೂಪಾಂತರಿಸಿಕೊಳ್ಳಬೇಕೆಂಬುದರ ಬಗ್ಗೆ ನಾವು ಹೆಚ್ಚು ಗಮನ ಹರಿಸಿಲ್ಲ. ಈಗ ಯೂನಿವರ್ಸಿಟಿ ಎಕ್ಸ್‌ಟೆನ್‌ಷನ್ ವಿಭಾಗದವರು ಒಳ್ಳೆಯ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಈ ಎಲ್ಲ ಕಾರಣಗಳಿಂದ ಒಂದು ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡಬೇಕೆಂಬ ನಿಶ್ಚಯವನ್ನು ನಾನು ಮಾಡಿದೆ. ನನ್ನ ಸಹೋದ್ಯೋಗಿಗಳು ಕ್ಯಾಬಿನೆಟ್ಟಿನಲ್ಲಿ ಬಹಳ ವರ್ಷಗಳಿಂದ ಈ ವಿಚಾರವನ್ನು ತೆಗೆದುಕೊಂಡರೂ ಇದು ವರೆಗೆ ತೀರ್ಮಾನವಾಗದೆ ಇತ್ತು. ಆದರೂ ನಾನು ಸುಮ್ಮನೆ ಕುಳಿತುಕೊಳ್ಳಲಿಲ್ಲ. ನಾವು ಇಂತಹ ಆಕ್ಟನ್ನು ತರಬೇಕಾದರೆ ಇದನ್ನು ನಾವು ಮೊದಲು ಪರೀಕ್ಷೆ ಮಾಡೋಣವೆಂದು ಹೇಳಿ ಒಂದು ತಜ್ಞರ ಸಮಿತಿಯನ್ನು ನೇಮಿಸಿದ್ದೇವೆ. ಆ ತಜ್ಞರ ಸಮಿತಿಯವರು ವರದಿಯನ್ನು ಕೊಟ್ಟರು. ಆ ವರದಿಯನ್ನು ನೋಡಿದ ಮೇಲೆ, ಯೂನಿವರ್ಸಿಟಿ ತಜ್ಞರು, ನಮ್ಮ ತಜ್ಞರು ಪರದೇಶದ ಎಲ್ಲಾ ಯೂನಿವರ್ಸಿಟಿಗಳ ಆಕ್ಟನ್ನು ಪರಾಂಬರಿಸಿ ಕೊನೆಗೆ ಒಂದು ನಿರ್ಣಯಕ್ಕೆ ಬಂದಿದ್ದಾರೆ. ಅದರಲ್ಲಿ ಅನೇಕ ಲೋಪದೋಷಗಳಿವೆ. ಆದರೆ ಲೋಪದೋಷಗಳು ಇದರಲ್ಲಿ ಏನೂ ಇಲ್ಲವೆಂದು ನಾನು ಹೇಳುವುದಿಲ್ಲ. ಕೆಲವು ಕಡೆಗಳಲ್ಲಿ ಅಸಮರ್ಪಕವಾದ ರೀತಿಯಲ್ಲಿ ಡ್ರಾಫ್ಟ್ ಕಾಣುತ್ತಾ ಇರಬಹುದು. ಇವೆಲ್ಲ ವಿಚಾರಣೆಯಾದ ಮೇಲೆ ಇದಕ್ಕೆ ಒಂದು ಹೆಸರನ್ನು ಇಡುವುದು ಸೂಕ್ತವೆಂದಾಗ ಒಬ್ಬ ಮಾನ್ಯ ಸದಸ್ಯರು ಕೆ. ಎಚ್. ಪಾಟೀಲ್ ಅವರ ಕಾಯಿದೆಯೆಂದು ಇಡೋಣವೆಂದರು. ಅದರಲ್ಲಿ ನನ್ನ ಪರಿಶ್ರಮ ಇವತ್ತು ಇರಬಹುದು. ನಾಳೆ ಇರಲಿಕ್ಕಿಲ್ಲ. ಈಗ ನಾವು ಈ ದೇಶದ, ರಾಜ್ಯದ, ರಾಷ್ಟ್ರದ ರಾಜಕೀಯ ಕ್ಕೋಸ್ಕರ ಇರುತ್ತೇವಷ್ಟೆ. ವ್ಯವಸಾಯಾಭಿವೃದ್ಧಿಯನ್ನು ರಾಜಕೀಯಕ್ಕಾಗಿ ಮಾಡುವುದಿಲ್ಲವೆಂಬ ಮಾತನ್ನು ಹೇಳುತ್ತಿದ್ದೇನೆ. ಯಾವ ಸರಕಾರವೇ ಆಗಲೀ, ಆ ಕಡೆಯವರು ಆಗಲೀ, ಈ ಕಡೆಯವರೇ ಆಗಲೀ ಮೂರನೆಯವರು ಯಾರೇ ಆಗಲೀ ಅವರಿಗೆ ನಾನು ಪ್ರಾರ್ಥನೆ ಮಾಡುವುದಿಷ್ಟೇ. ನಾನು ಈಗಾಗಲೇ ಈ ಕಾಯಿದೆಯ ಬಗ್ಗೆ ಮೊದಲಿದ್ದ ಕಾಯಿದೆ ಮತ್ತು ಅನಂತರ ಈ ಬಿಲ್ಲಿಗೆ ಬಂದಂಥ ತಿದ್ದುಪಡಿಗಳನ್ನು ಸೇರಿಸಿ ಒಂದು ಪುಸ್ತಕದ ರೂಪದಲ್ಲಿ ಎಲ್ಲ ಸದಸ್ಯರ ಕೈಗೆ ಕೊಟ್ಟಿದ್ದೇನೆ. ನಾಳೆಯ ದಿವಸ ಇದರ ಅವಶ್ಯಕತೆಯ ಕಡೆಗೆ ಒಂದು ಪುಸ್ತಕವನ್ನು ಹಂಚುತ್ತೇನೆ. ಇದರಲ್ಲಿ ಪ್ರಾಮುಖ್ಯವಾದ 10-11 ಸೆಕ್ಷನ್‌ಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳು ಆಗುತ್ತವೆ. ಉಳಿದುದು ಹಾಗೆಯೇ ಇರುತ್ತವೆ. ಅಂತಹ ಎರಡು ಮೂರು ಬದಲಾವಣೆಗಳಿಂದ ನಿಜವಾಗಿ ಇದು ಒಳ್ಳೆಯ

ಪ್ರೋಗ್ರೆಸಿವ್ ಬಿಲ್ ಆಗುತ್ತದೆಂದು ಅಗ್ರಿಕಲ್‌ಚರಲ್ ಯೂನಿವರ್ಸಿಟಿ ಚಾನ್ಸಲರ್ ಅವರು ಹೇಳಿದ್ದಾರೆ. ಇದು ರೈತರ ದೃಷ್ಟಿಯಿಂದ ಬಹಳ ಅತ್ಯುತ್ತಮವಾದುದೆಂದು ಹೋದ ವರ್ಷ ಅಗ್ರಿಕಲ್‌ಚರಲ್ ಯೂನಿವರ್ಸಿಟಿಯಲ್ಲಿ ಮಾಡಿದನ್ನು ಮಾನ್ಯ ಸದಸ್ಯರಲ್ಲಿ ಅನೇಕರು ರೈತರಾದವರು ತಾವೇ ಸಾಕ್ಷಿಭೂತವಾಗಿ ನೋಡಿದ್ದಾರೆ. ನಮಗೆ ಅಗ್ರಿಕಲಚರಲ್ ಕಾಲೇಜಿನಲ್ಲಿ ಅಡ್ಮಿಷನ್ಸ್ ಸಿಗುವುದಿಲ್ಲವೆಂದು ಹೇಳಿದಂಥ ಮಾತು ನೆನಪಿನಲ್ಲಿರಬಹುದು. ಅನೇಕ ಜನರು ಸ್ವಯಂ ಪ್ರಯತ್ನ ಮಾಡಿದರೂ ಸಹ ಅಗ್ರಿಕಲ್‌ಚರಲ್ ಯೂನಿವರ್ಸಿಟಿಯಲ್ಲಿ ಅಡ್ಮಿಷನ್ ಸಿಗಲಿಲ್ಲ. ರೈತರಿಗೇ ಆಗಲೀ, ಇತರರಿಗೇ ಆಗಲೀ ರೆಪ್ರಸೆಂಟೇಷನ್ ಕೊಡುವುದಕ್ಕಾಗಲಿಲ್ಲ ಆದರೂ ಸಹ ಆಗಲೂ ಸ್ವಯಂ ಪ್ರಯತ್ನ ಮಾಡಿ ನೂರಾರು ಚೀಟಿಗಳನ್ನು ಹಂಚಿ ಮಾನ್ಯ ಸದಸ್ಯರು ಶಿಫಾರಸ್ಸು ಮಾಡಿದಂಥ ಸುಮಾರು 20-30 ಜನರಿಗೆ ಅಡ್ಮಿಷನ್ ಅಲ್ಲಿ ಕೊಟ್ಟಿದ್ದೇವೆ. ಅಷ್ಟು ಮಾತ್ರ ಸಾಧ್ಯವಾಯಿತು. ಈಗ ಈ ಕಾಯಿದೆಯಲ್ಲಿ ಯಾ ಮಾನ್ಯ ಸದಸ್ಯರೆಲ್ಲರೂ ಒಪ್ಪುವಂತೆ ಯೋಗ್ಯವಾದಂಥ ನಿರ್ದಿಷ್ಟವಾದ ರೂಪರೇಖೆಗಳನ್ನು ಅಳವಡಿಸಿದ್ದೇವೆ. ರೈತರಿಗೆ, ಹರಿಜನರಿಗೆ ಹಿಂದುಳಿದ ವರ್ಗದವರಿಗೆ ಮತ್ತು ಇನ್ನೂ ಅನೇಕ ಜನಾಂಗಗಳವರಿಗೆ ಅಡ್ಮಿಷನ್ ರಿಜರ್ವ್ ಮಾಡಿರುವ ಹಾಗೆ ಈಗಾಗಲೇ ಸಲಹೆಗಳನ್ನು ನೀಡಿದ್ದೇವೆ. ಇನ್ನೂ ಕೆಲವು ಸಲಹೆಗಳನ್ನು ಕೊಟ್ಟು ಅವರಿಗೆ ಬೇಕಾದಂಥ ಸೌಲಭ್ಯಗಳನ್ನು ಕೊಡಬೇಕೆಂದು ಬರೆದಿದ್ದೇವೆ. ಪೊಲಿಟಿಕಲ್ ಸಫರರ್ಸ್‌ಗೆ ಕೆಲವು ಸ್ಥಾನಗಳನ್ನು ಮೀಸಲಾಗಿಡಬೇಕೆಂದು ಸಲಹೆ ಇದೆ ಅದನ್ನು ಒಪ್ಪೋಣ. ಮೊದಲಿನಿಂದಲೂ ಇದು ತಂದಂಥ ಪ್ರಾವಿಷನ್. ಅಗ್ರಿಕಲ್‌ಚರಲ್ ಎಂಪ್ಲಾಯಿ ಅಸೋಸಿಯೇಷನ್ನಿನವರು ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟು ಈ ಕಾಯಿದೆಯ ಬಗ್ಗೆ ಟೀಕೆ ಮಾಡಿದರು. ಈ ವಿಚಾರದಲ್ಲಿ ನಾನು ಒಂದು ಕಮಿಟಿಯನ್ನು ಕರೆದು ಇದರ ಬಗ್ಗೆ ವಿಚಾರಮಾಡಿದ ಮೇಲೆ ಇವತ್ತು ಬಂದು ಈ ಕಾಯಿದೆ ಬಹಳ ಚೆನ್ನಾಗಿದೆಯೆಂದು ಹೇಳಿ ಕೇವಲ 4 ಸೆಕ್ಷನ್‌ಗಳಲ್ಲಿ ಮಾತ್ರ ಅಲ್ಪಸ್ವಲ್ಪ ಬದಲಾವಣೆಗಳನ್ನು ಸೂಚಿಸಿದ್ದಾರೆ. ಅದನ್ನೂ ಸಹ ಸರ್ಕಾರ ಒಪ್ಪುವುದಕ್ಕೆ ಯಾವುದೇ ರೀತಿಯಲ್ಲಿ ಏನೂ ಅಭ್ಯಂತರವಿಲ್ಲವೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಟ್ಟಿನಲ್ಲಿ ಈ ಕಾಯಿದೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಪರಾಂಬರಿಸಿದರೆ, ನಿಜವಾಗಿಯೂ ಇದರಲ್ಲಿ ಯಾವುದೇ ರೀತ್ಯ ಸಂಶಯವಿಲ್ಲ. ಚಾನ್ಸಲರಿಗೆ ಇರುವ ಅಧಿಕಾರವನ್ನು ಪ್ರೊಚಾನ್ಸಲರಿಗೆ 3—4 ಸೆಕ್ಷನ್‌ಗಳಲ್ಲಿ ಕೊಡಲಾಗಿದೆ. ಚಾನ್ಸಲರ್ ಒಬ್ಬರನ್ನು ಸರ್ಕಾರದಿಂದ ನೇಮಿಸುವಂಥಾದ್ದು. ಅದು ಆಗಬಹುದು. ಅದರೆ ಪ್ರೊಚಾನ್ಸಲರ್ ಎಲೆಕ್ಟೆಡ್ ಪ್ರತಿನಿಧಿಯಾಗಬಹುದು. ಅದಕ್ಕೆ ಶ್ರೀ ಕೆ. ಎಚ್. ಪಾಟೀಲರೇ ಇರಬಹುದು. ಅಥವಾ ಇನ್ನು ಯಾರಾದರೂ ಇರಬಹುದು. ಅವರು ನಮ್ಮಿಂದ ಚುನಾಯಿತ ಪ್ರತಿನಿಧಿಯಾಗಿ ಅವರಿಗೆ ಇರುವ ಅಧಿಕಾರವನ್ನು ಇವರಿಗೆ ವರ್ಗಾಯಿಸಬಹುದಷ್ಟೆ. ಆದರಿಂದೇನು ಅಷ್ಟೊಂದು ಪ್ರಮಾದವಾಯಿತು?

ಶ್ರೀ ಎಂ. ಎಸ್. ಕೃಷ್ಣನ್ :—ಮಂತ್ರಿಗಳು ಯಾರೋ ರಾಜೀನಾಮೆ ಕೊಟ್ಟಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್ :—ನನ್ನ ಬಗ್ಗೆ ಮಾನ್ಯ ಸದಸ್ಯರಿಗೆ ಸಾಕಷ್ಟು ಪರಿಚಯವಿರಬೇಕು. ಮಂತ್ರಿ ಪದವಿ ಹೋದರೆ ನಾನು ನನ್ನ ಇತಿಹಾಸಕ್ಕೆ ತಿಲಾಂಜಲಿಯನ್ನು ಕೊಡುವವನಲ್ಲ. ಉತ್ತಮರಾರೂ ಈ ಕಾಲದಲ್ಲಿ ರಾಜಿ ನಾಮೆ ಕೊಡುವುದಿಲ್ಲ. ಈ ಮಾತನ್ನು ನಾನು ಹಿಂದೆ ಎದುರು ಪಕ್ಷದಲ್ಲಿ ಕೂತು ಕೊಂಡು ಟೀಕೆಮಾಡಿದ್ದೇನೆ. ಎದುರು ಪಕ್ಷದಲ್ಲಿದ್ದಾಗ ನಾವೇ ಟೀಕೆಮಾಡುವಾಗ ಇಲ್ಲದಸಲ್ಲದ ನುಡಿಗಳಲ್ಲಿ ರೀತಿನೀತಿಗಳಲ್ಲಿ ಇಂತಹ ಅನೇಕ ಕಾಯಿದೆಗಳನ್ನು ವಿರೋಧಮಾಡುತ್ತಿದ್ದೆವು. ರೈತರಿಗೆ ಸಮರ್ಪಕವಾದ ರೀತಿಯಲ್ಲಿ ಕಾಯಿದೆ ಗಳನ್ನು ತರದಿದ್ದರೆ ನಾವೇ ಹಿಂದೆ ವಿರೋಧವಾಗಿದ್ದೆವು. ಅಂಥಾದ್ದು ಜನತೆಯ ಮುಂದೆ ಬರಲಿಲ್ಲವೆ? ಆದ್ದರಿಂದ ಈಗ 63 ಸೆಕ್ಷನ್‌ಗಳನ್ನೊಳಗೊಂಡ ಈ ಕಾಯಿದೆಯನ್ನು ನಾವಾದರೂ ಒಂದು ಸಾರಿಯಲ್ಲ, ಎರಡು ಸಾರಿಯಲ್ಲ, ಅನೇಕ ಸಾರಿ ನೋಡಿ ಬದಲಾವಣೆಗಳನ್ನು ಹಾಗೂ ತಕ್ಕ ಸೂಚನೆಗಳನ್ನು ಕಳುಹಿಸಿದ್ದೇವೆ. ಇಲ್ಲದಿದ್ದರೆ ಅಂತಹ ಸೂಚನೆಗಳನ್ನು ನಾವೇ ಒಪ್ಪುವುದಿಲ್ಲ. ಎಷ್ಟೋಸಾರಿ ಯೋಗ್ಯವಾದ ಸೂಚನೆಗಳು ಇದ್ದರೂ ಅವನ್ನು ಅನೇಕ ಸಾರಿ ಒಪ್ಪಬೇಕಾ ಗಿದ್ದರೂ ಕೆಲವಾರು ಸಂದರ್ಭಗಳಲ್ಲಿ ತಿರಸ್ಕರಿಸುತ್ತೇವೆಂದು ಹೇಳಿದಾಗ ಯಾವುದೇ ರೀತಿಯ ಟೀಕೆಗಳನ್ನು ಯಾರೂ ಮಾಡಲಿಲ್ಲ. ನಾನು ಯಾವ ಪುಸ್ತಕವನ್ನೂ ನೋಡಲಿಲ್ಲ. ಉಳಿದ ರಾಜ್ಯಗಳ ಅಗ್ರಿಕಲ್‌ಚರಲ್ ಯೂನಿವರ್ಸಿಟಿಯ ಪ್ರತಿ ಯೊಂದು ಕಾಲೇಜಿಗೂ ನಾವು ವಿರೋಧಮಾಡಿಲ್ಲ. ಅದು ವ್ಯಂಗ್ಯವಾಗಿ ಟೀಕೆ ಮಾಡುವಂಥ ಟೀಕೆ ಅಗಬಾರದು. ನಾನು ಇದಕ್ಕಿಂತ ಹೆಚ್ಚಿಗೆ ಏನೂ ಹೇಳುವುದಿಲ್ಲ.

ಮಾನ್ಯ ಸಭಾಪತಿಗಳೇ, ಈ ಯೂನಿವರ್ಸಿಟಿ ಬಿಲ್‌ನಲ್ಲಿ ಒಂದು ಬದ ಲಾವಣೆಯನ್ನು ಮಾಡಿದ್ದೇವೆ. ಅದಕ್ಕೆ ಅನೇಕ ಸದಸ್ಯರ ವಿರೋಧಾಭಿಪ್ರಾಯ ಇದೆಯೆಂದು ನಾನು ಭಾವನೆ ಮಾಡುತ್ತೇನೆ. ಅದಕ್ಕಾಗಿ ಒಂದು ಸಣ್ಣ ಸಲಹೆ ಯನ್ನು ಮಾಡಲು ಅಪೇಕ್ಷೆ ಮಾಡುತ್ತೇನೆ. ಯೂನಿವರ್ಸಿಟಿ ನೌಕರರು ಸರ್ಕಾರಿ ನೌಕರರಾಗಿದ್ದಾರೆಂದು ಹೇಳಿದ್ದೇವೆ. ಇದನ್ನು ಏಕೆ ಹಾಕಿದಿರಿ ಎಂಬುದಾಗಿ ನಾನು ಲಾ ಮಿನಿಸ್ಟರನ್ನು ಕೇಳಿದೆ. ಅವರು ಯೂನಿವರ್ಸಿಟಿ ಅಧಿಕಾರಿಗಳಲ್ಲಿ ಇಂದು ಕೆಲವರು ಸರ್ಕಾರದಿಂದ ಅಲ್ಲಿಗೆ ಹೋಗಿರುವಾಗ ಅವರಿಗೆ ಅಲ್ಲಿ ರಿಪಾಟ್ರಿ ಯೇಟ್ ಮಾಡುವುದಕ್ಕೆ ಎಲ್ಲಿಯೂ ಸ್ಥಾನವಿಲ್ಲ. ಅವರು ಇಂತಹ ಅಂತರ್ಗತ ಸ್ಥಿತಿಯಲ್ಲಿದ್ದಾರೆ, ಹೈಕೋರ್ಟು ಕಳುಹಿರುವ ಆಜ್ಞೆ ತಪ್ಪು ಎಂದು ಹೇಳಿದರು. ಹೀಗೆ ಅಲ್ಲಿ ಅನೇಕ ಜನ ಸರ್ಕಾರದ ನೌಕರರು ಇದ್ದಾರೆ. ಅವರು ಸರ್ಕಾರದ ನೌಕರರೋ ಅಥವಾ ಯೂನಿವರ್ಸಿಟಿ ನೌಕರರೋ ಎಂಬುದು ಏನೂ ತಿಳಿಯದೇ

ಇರುವ ಸಮಸ್ಯೆ ಇರುವಾಗ ನಾನು ಆ ರೀತಿಯಾಗಿ ಸಲಹೆ ಮಾಡಿದೆ. ಮಾನ್ಯ ಸದಸ್ಯರು ಆ ಸಲಹೆ ಬೇಡವೆಂದು ಹೇಳಿದರೆ ಅದನ್ನು ಬದಲಾವಣೆ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ನಾನು ಅದಕ್ಕೆ ಅಡ್ಡಿ ಬರುವುದಿಲ್ಲ. ನನ್ನ ಒಟ್ಟು ಅಭಿಪ್ರಾಯ, ಯೂನಿವರ್ಸಿಟಿ ತನ್ನ ಅಟಾನಮಸ್ ನೇಚರನ್ನು ಕಳೆದುಕೊಳ್ಳಬಾರದು. ಅದು ಇರಬೇಕು. ಆದರ ಜೊತೆಗೆ ಸರ್ಕಾರದವರೂ ಕೂಡ ಯೂನಿವರ್ಸಿಟಿ ಪೂರೈಸುವಂಥ ಹೇರಳವಾಗಿ ಹಣದ ವಿತರಣೆಯಲ್ಲಿ, ಖರ್ಚಿನಲ್ಲಿ, ಅವ್ಯವಹಾರ, ಅಪಚಾರ ಮಾಡದಂತೆ ಸೂಕ್ತ ಮಾರ್ಗಗಳನ್ನು ಅನುಸರಣೆ ಮಾಡುವಂತಿರಬೇಕೆಂದು ನನ್ನ ಅಭಿಪ್ರಾಯ. ಹಿಂದಿನ ಆಕ್ಟ್‌ನೊಳಗೆ ಯಾವ ರೀತಿಯಾದಂಥ ಈಗಿನ ಬದಲಾವಣೆಗಳನ್ನು ಮಾಡಿದ್ದಾರೆ? ಹಿಂದಿನ ಆಕ್ಟ್‌ನಲ್ಲಿ ಪ್ರೊಛಾನ್ಸಲರಿಗೆ ಯೂನಿವರ್ಸಿಟಿ ಬೋರ್ಡ್ ಮ್ಯಾನೇಜ್‌ಮೆಂಟಿನ ಬದಲಾವಣೆ ಇಲ್ಲವೆಂದು ಕಾನೂನು ಇಲ್ಲವೇ? ನೋಟೀಸ್ ಕೊಟ್ಟು ಪೇಪರ್ಸ್ ತರಿಸುವ ಅಧಿಕಾರವಿಲ್ಲವೇ? ಆದ್ದರಿಂದ ದೊಡ್ಡ ದೊಡ್ಡ ಯೂನಿವರ್ಸಿಟಿಗಳನ್ನು ರದ್ದು ಮಾಡಬೇಕೆಂಬ ಕಾನೂನು ಇರುವುದು ಸಮರ್ಪಕವಲ್ಲ. ಅದಕ್ಕಿಂತ ಮೊದಲು ಯಾವಾಗ ಯೂನಿವರ್ಸಿಟಿಗಳು ಹೆಚ್ಚಿಗೆ ಬೆಳೆಯತಕ್ಕ ಯೋಚನೆ ಮಾಡುವಂತಹ ಅಗತ್ಯವಿರುವಾಗ, ಇದನ್ನು ನೀವು ಏಕೆ ವಿಚಾರ ಮಾಡಬೇಕು? ಇನ್ನು ತಮ್ಮ ಎದುರಿಗೆ ಪ್ರೋಛಾನ್ಸಲರ್ ಇಬ್ಬರು ಇರುವುದ ಬೇಡ ಅದನ್ನು ಬದಲಾವಣೆ ಮಾಡಿ, ಆದನ್ನೂ ಛಾನ್ಸಲರಿಗೆ ಕೊಡಿ ಎಂದು ಹೇಳಿದರೆ, ಆ ವಿಚಾರವನ್ನು ಸರ್ಕಾರದ ಮುಂದೆ ಇಡೋಣವೆಂದು ನಾನು ಹೇಳುತ್ತೇನೆ, ಅದಕ್ಕೆ ನನ್ನ ಅಭ್ಯಂತರವಿಲ್ಲ. ನಾನು ಈ ವಿಚಾರದಲ್ಲಿ ಸರ್ಕಾರದಲ್ಲಿ ಯಾವ ರೀತಿಯಾದ ಒಂದು ನಿರ್ಣಯ ಬರುತ್ತದೋ ಆ ಒಂದು ನಿರ್ಣಯವನ್ನು ಪಾಲನೆ ಮಾಡುವುದಕ್ಕೆ ನಾನು ಸಮರ್ಥನಿದ್ದೇನೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಈಗಿನ ಯೂನಿವರ್ಸಿಟಿಯ ಹೊಸ ಕಾಯಿದೆಯಲ್ಲಿ ಯೂನಿವರ್ಸಿಟಿಯಲ್ಲಿ ಕೆಲಸ ಮಾಡುವ ಅಧಿಕಾರವರ್ಗದ ರೂಪುರೇಖೆಗಳನ್ನು ಹೆಚ್ಚು ಬಲವತ್ತರಗೊಳಿಸಲಾಗಿದೆ.

5-00 P.M.

ಈ ಮಸೂದೆಯ ಬಗ್ಗೆ ವೈಸ್‌ಛಾನ್ಸಲರಾಗಿ ಎಲ್ಲಾ ಅಧಿಕಾರಿಗಳೂ ತಮ್ಮ ಒಪ್ಪಿಗೆಯನ್ನು ವ್ಯಕ್ತಪಡಿಸಿದ್ದಾರೆ. ಇಂಥ ಮಹತ್ವದ ಒಂದು ಮಸೂದೆಯನ್ನು ಈ ಮಹಾಸದನದವರು ಒಂದೇ ದಿನದಲ್ಲಿ ಒಪ್ಪಬಹುದಾಗಿತ್ತು. ಆದರೆ ಈಗಲೂ ಸಹಿತ ವೇಳೆ ಮೀರಿಲ್ಲ. ಇದನ್ನು ವಿಚಾರ ಮಾಡುವುದು ಅನಂತರ ಅನುಮೋದಿಸತಕ್ಕದ್ದು ಇನ್ನೂ ಉತ್ತಮವಾದದ್ದು. ನಾನು ಈಗ ಈ ಬಿಲ್ಲನ್ನು ಈ ಸದನದ ಎಲ್ಲ ಸದಸ್ಯರ ಮುಂದೂ ಮಂಡನೆ ಮಾಡುತ್ತಿದ್ದೇನೆ. ಈ ಮಸೂದೆಯನ್ನು ಅಗ್ರಿಕಲ್ಚರಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನವರ ಮಾರ್ಗದರ್ಶನದಲ್ಲಿ ಇದನ್ನು ನಡೆಸುತ್ತಿದ್ದೇವೆ. ನಮ್ಮ ದೇಶದಲ್ಲಿ ರೈತರಿಗೆ ಇನ್ನೂ ನಾವು ಇಲ್ಲಿಯತನಕ ಆಧುನಿಕ ಮಟ್ಟದ ಸಲಕರಣೆ

(ಶ್ರೀ ಕೆ. ಹೆಚ್. ಪಾಟೀಲ್)

ಗಳನ್ನು ಒದಗಿಸುವುದಕ್ಕಾಗಿಲ್ಲ. ರೈತರಿಗೆ ಆಧುನಿಕ ಸಲಕರಣೆಗಳನ್ನು ಒದಗಿಸ ಬೇಕು. ನಮ್ಮಲ್ಲಿ ಈ ಉತ್ಪನ್ನ ಆದಷ್ಟು ಬೇಗನೆ ಒಂದಕ್ಕೆ ನಾಲ್ಕರಷ್ಟು ಹೆಚ್ಚ ಬೇಕಾಗಿದ. ಇಷ್ಟೆಲ್ಲಾ ಉದ್ದೇಶಗಳನ್ನು ಇಟ್ಟುಕೊಂಡು ನಾನು ಇದನ್ನು ಮಾಡುತ್ತಿದ್ದೇನೆ. ಆದರೆ ಒಂದು ಅನಿವಾರ್ಯಕ್ಕಾಗಿ ಈ ದಿವಸ ಈ ಯೂನಿ ವರ್ಸಿಟಿ ಧಾರವಾಡದಲ್ಲಿ ಸ್ಥಾಪನೆಯಾಗಬೇಕಾಗಿದೆ. ಅದಕ್ಕೆ ಕಾರಣ ಅಲ್ಲಿ ಈ ಯೂನಿವರ್ಸಿಟಿಗೆ ಅಗತ್ಯವಾಗಿ ಬೇಕಾದ ಅನೇಕ ಸಲಕರಣೆಗಳು ಸಾಮಾನುಗಳು ಅಲ್ಲಿವೆ. ಇದರಿಂದ ಸರ್ಕಾರಕ್ಕೆ ಬಹಳ ಕಡಮೆ ಖರ್ಚು ಬರುತ್ತದೆ. ನಮಗೆ ಅಲ್ಲಿ ಇದನ್ನು ಸ್ಥಾಪನೆಗೆ ಮಾಡುವುದರಿಂದ ಅಂದಾಜು 4.49 ಲಕ್ಷ ರೂಪಾಯಿಗಳ ಖರ್ಚು ಬರುತ್ತೆಂದು ನಿರೀಕ್ಷಿಸಲಾಗಿದೆ. ಮುಂದೆ ಇನ್ನೂ ರಾಜ್ಯದಲ್ಲಿ ಇಂಥ ಯೂನಿವರ್ಸಿಟಿಗಳನ್ನು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ತೆರೆಯಬೇಕಾದ ಅವಶ್ಯಕತೆ ಬರಬಹುದು, ಆಗೆ ಮಂಗಳೂರಲ್ಲಿ ಒಂದು-ಗುಲ್ಬರ್ಗಾದಲ್ಲಿ ಒಂದು ಹೀಗೆ ತೆರೆಯಬಹುದು. ಹೀಗೆ ಇನ್ನು ಮುಂದೆ ಮಂಜೂರಾಗತಕ್ಕ ಯೂನಿವರ್ಸಿಟಿಗಳು ಎಲ್ಲಿಗಾದರೂ ಹೋಗಬಹುದು. ಈಗ ಇದು ಸಾಕಷ್ಟು ಪ್ರಗತಿಯನ್ನು ಮುಟ್ಟಿರು ವಾಗ ಇದಕ್ಕೆ ಯಾರೂ ದಯವಿಟ್ಟು ಅಡ್ಡ ಬರಬಾರದು; ಎಂದು ತಮ್ಮೆಲ್ಲ ರಲ್ಲೂ ಬಹಳ ನಮ್ರಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ರಾಜ್ಯದಲ್ಲಿ ಯಾವುದೇ ಒಂದು ಅಭಿವೃದ್ಧಿ ಕಾರ್ಯವಾಗಲಿ ಅದು ವಿದ್ಯೆಯೇ ಆಗಲಿ, ವ್ಯವಸಾಯದಲ್ಲಾಗಲೀ ಒಂದು ಔದ್ಯೋಗಿಕ ರಂಗದಲ್ಲಾಗಲೀ....ಹೀಗೆ ಯಾವುದೇ ಬರಲಿ ನಾವೆಲ್ಲರೂ ಒಂದುಗೂಡಿ ರಾಜ್ಯದ ಪ್ರಗತಿಯನ್ನು ಸಾಧಿ ಸೋಣ. ಇಂದು ನಮಗೆ ಒಂದು ಒಳ್ಳೆಯ ಸಮಯ ಕೂಡಿ ಬಂದಿದೆ. ಇಂಥ ಸಮಯವನ್ನು ಕಳೆದುಕೊಂಡ ನಂತರ ಇಂಥಾ ಒಂದು ಅನುಕೂಲ ನಮಗೆ ದೊರೆಯಲಿಲ್ಲವಲ್ಲಾ ಎಂದು ಅನಂತರ ಯಾರೂ ಮರುಗುವುದು ಬೇಡ. ಧಾರ ವಾಡದಲ್ಲಿ ಅಲ್ಲಿಯ ಯೂನಿವರ್ಸಿಟಿಯ ಬೆಳ್ಳಿ ಹಬ್ಬಕ್ಕೆ ಬಂದಿದ್ದ ಅಗ್ರಿಕಲ್ಚರಲ್ ರಿಸರ್ಚ್ ಇನ್ಸ್ಟಿಟ್ಯೂಟಿನವರು ಅಲ್ಲಿನ ಅನುಕೂಲತೆಗಳನ್ನು ನೋಡಿ ಅಲ್ಲಿ ಈ ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡುವುದಕ್ಕೆ ಅವರಾಗಿ ಅವರೇ ಉತ್ತೇಜನ ಕೊಟ್ಟರು. ಅದೇ ರೀತಿ ಆ ಐ. ಸಿ. ಆರ್. ನವರೂ ಕೂಡ ನಮಗೆ ಬಹಳ ಉತ್ತೇಜನಕರವಾಗತಕ್ಕ ರೀತಿಯಲ್ಲಿ ಬರೆದಿದ್ದಾರೆ. ಶ್ರೀ ಅರ್ಮುಗಂರವರು ಯೂನಿವರ್ಸಿಟಿ ಗ್ರ್ಯಾಂಟ್ ಕಮಿಷನ್ನಿನವರಿಂದ ನಾವು ಗ್ರ್ಯಾಂಟನ್ನು ಏಕೆ ಪಡೆಯ ಲಿಲ್ಲ ಎಂದು ಕೇಳಿದ್ದಾರೆ. ಆದರೆ ಹಾಗೆ ಗ್ರ್ಯಾಂಟನ್ನು ಪಡೆಯತಕ್ಕ ಪ್ರಶ್ನೆ ನಾವು ಇಲ್ಲಿ ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡಿದ ಮೇಲೆ ಉದ್ಭವವಾಗುತ್ತದೆಯೇ ವಿನಾ ಅದಕ್ಕೆ ಮೊದಲು ಆ ಪ್ರಶ್ನೆ ಬರುವುದಿಲ್ಲ. ನಮಗೆ ಈಗ ಇದಕ್ಕೆ ಐ.ಸಿ.ಆರ್ ನವರಿಂದ ಗ್ರ್ಯಾಂಟ್ ಸಿಕ್ಕುತ್ತದೆ. ಈಗ ನಾವು ಇದನ್ನು ಮಾಡದೆ ಕೈಬಿಟ್ಟರೆ ಮುಂದು ಗ್ರ್ಯಾಂಟನ್ನು ಕ್ಲೈಂ ಮಾಡುವುದಕ್ಕೆ ಬರುವುದಿಲ್ಲ. ನಾವು ಈ ದಿವಸ

ಇದನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಿದರೂ ಇದನ್ನು ಪ್ರಾರಂಭ ಮಾಡುವುದಕ್ಕೆ ಒಂದು ವರ್ಷದ ಮೇಲೆ ಹಿಡಿಯುತ್ತದೆ. ಅಂದಾಗ ಈಗ ಈ ಮಸೂದೆಗೆ ಅಡೆತಡೆಗಳನ್ನು ಉಂಟು ಮಾಡುವುದು ಸಾಧುವಾದುದ್ದೇ ಅನ್ನುವುದನ್ನು ಮಾನ್ಯ ಸದಸ್ಯರೇ ಆಲೋಚಿಸಬೇಕು. ಆದರೆ ನನ್ನ ಉದ್ದೇಶ ನಾಳೆಗೆ ಬರುವುದು ಇಂದೇ ಬರಲಿ—ಅನ್ನುವುದು. ನಮಗೆ ಬಹಳ ಕಾಲದವರೆಗೆ ಈ ಐ. ಸಿ. ಆರ್. ಮತ್ತು ಯೂನಿವರ್ಸಿಟಿ ಗ್ರಾಂಟ್ ಕಮಿಷನ್ನಿನವರಿಂದ ನಮ್ಮ ಅಭಿವೃದ್ಧಿ ಸಾಧನೆಗೆ ಬೇಕಾದ ಸಹಾಯ ಸಹಕಾರಗಳು ದೊರೆಯಲಾರವು. ಅಂದಾಗ ಅವು ಸಿಕ್ಕಾಗ ನಾವೇಕೆ ಬಿಡಬೇಕು? ಮತ್ತು ಇಲ್ಲಿ ಈ ಯೂನಿವರ್ಸಿಟಿಯನ್ನು ಸ್ಥಾಪಿಸುವುದರಿಂದ ಇಲ್ಲಿ ಅನೇಕ ಬಾಬುಗಳ ಹೈಯರ್ ಎಜುಕೇಶನ್ನನ್ನು ಪ್ರಾರಂಭಮಾಡುವುದಕ್ಕೆ ಸಾಧ್ಯವಾಗುತ್ತದೆ. ಡ್ರೈ ರಿಸರ್ಚಿಗೂ ಅನುಕೂಲವಾಗುತ್ತದೆ. ಈ ನಾನಾ ಕಾರಣಗಳಿಂದ ನಾನು ವಿರೋಧಪಕ್ಷದ ನಾಯಕರ ಹಾಗೂ ಈ ಮಾನ್ಯ ಸಭೆಯ ಎಲ್ಲಾ ಸದಸ್ಯರ ಅಂತಃಕರಣಪೂರ್ವಕವಾದ ಸಹಕಾರ ನೀಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದರೆ ಇಂಥ ಒಂದು ಯೂನಿವರ್ಸಿಟಿ ಸ್ಥಾಪನೆಯಾಗುವುದರಲ್ಲಿ ಅನೇಕ ಕಾರಣಗಳಿಂದ ನಿಧಾನವಾಗಿರಬಹುದು. ಅದಕ್ಕೆ ನನ್ನಲ್ಲೇ ಅನೇಕ ಲೋಪದೋಷಗಳಿರಬಹುದು. ಅದನ್ನು ತಾವೆಲ್ಲರೂ ಮನ್ನಿಸಿ ಇದಕ್ಕೆ ಅನುಮತಿ ಕೊಡಬೇಕಾಗಿದೆ. ಈ ದೊಡ್ಡ ಸದನಕ್ಕೆ ಈ ಕಾರ್ಯವಾದರೂ ಬಹಳ ಸಣ್ಣದು. ಆದಾಗ್ಯೂ ಇದು ರಾಜ್ಯದಲ್ಲಿ ಬಹಳಕಾಲ ಉಳಿಯತಕ್ಕದ್ದಾಗಿದೆ. ಆದುದರಿಂದ ಇದಕ್ಕೆ ಎಲ್ಲರೂ ಬೆಂಬಲ ನೀಡಬೇಕೇ ವಿನಾ ಇದಕ್ಕೆ ಅಡ್ಡಗಾಲನ್ನು ಕೊಡಬಾರದು. ಆದರೆ ಇಂದು ಕರ್ನಾಟಕ ರಾಜ್ಯದಲ್ಲಿ ಧಾರವಾಡ ಯೂನಿವರ್ಸಿಟಿ ಗಳಿಸುತ್ತಿರುವ ಪ್ರಗತಿಯನ್ನು ತಡೆಯುವುದಕ್ಕೆ ನಮ್ಮಗಳ್ಯಾರಿಂದಲೂ ಸಾಧ್ಯವಿಲ್ಲ. ಅಲ್ಲಿಯ ಪ್ರಗತಿ ಅದು ಆಗಲೇಬೇಕು. ಅದೇ ಆಗುತ್ತದೆ. ಈ ವಿಷಯವನ್ನು ನಾನು ತಮ್ಮಲ್ಲಿ ಬಹಳ ನಮ್ರತೆಯಿಂದ ಹೇಳುತ್ತಿದ್ದೇನೆ ಇಂಥ ಒಂದು ಶುಭ ಮುಹೂರ್ತದಲ್ಲಿ ಮಂಗಳ ಹಾಡತಕ್ಕ ಕಾಲದಲ್ಲಿ ಯಾರೂ ಇದಕ್ಕೆ ಅಮಂಗಳ ಹಾಡಬಾರದೆಂದು ನನ್ನ ಪ್ರಾರ್ಥನೆ. ತಮ್ಮೆಲ್ಲರ ವಿವರಣೆಗಳು ಬಂದ ನಂತರ ನಾನು ಇದಕ್ಕೆ ಸುದೀರ್ಘವಾದ ಉತ್ತರವನ್ನು ಕೊಡುತ್ತೇನೆ ತಾವು ಈ ಮಸೂದೆಯ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಿ ನನಗೆ ತಿದ್ದಿಕೊಳ್ಳುವುದಕ್ಕೆ ಅವಕಾಶಮಾಡಿಕೊಡಿ. ಇದು ಲಾ ಇಲಾಖೆಯಿಂದ ಪರಿಶೋಧಿಸಲ್ಪಟ್ಟು ಅನಂತರ ಇಲ್ಲಿ ಬಂದಿದೆ ಲಾ ಇಲಾಖೆ ಮಂತ್ರಿಗಳಿಗೆ ಆರೋಗ್ಯ ಸರಿಯಾಗಿಲ್ಲದೆ ಅವರು ಬಾರದೆ ಇದ್ದುದರಿಂದ ಈ ಬಿಲ್ಲನ್ನು ಇಲ್ಲಿ ತರಲು ಒಂದು ಒಂದೂವರೆ ತಿಂಗಳ ತಡವಾಯ್ತು. ಈ ಅಧಿವೇಶನದ ಪ್ರಾರಂಭದಲ್ಲೇ ಬರಬೇಕಾಗಿದ್ದ ಬಿಲ್ಲು ಈಗ ಬಂದಿದೆ. ಇದು ವ್ಯಸನಕರವಾದ ವಿಷಯ. ತೀವ್ರವಾಗಿ ಈ ವಿಧೇಯಕವನ್ನು ಪಾಸು ಮಾಡಬೇಕೆಂದು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

(*Madam Speaker in the Chair*)

ಶ್ರೀ ವಾಟಾಳ್ ನಾಗರಾಜ್ :—ಒಂದು ಸುದ್ದಿ ಬಂದಿದೆ. ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ಶ್ರೀ ಕಿತ್ತೂರ್‌ರವರು ರಾಜೀನಾಮೆ ಕೊಟ್ಟಿದ್ದಾರೆಂಬ ಸುದ್ದಿ ಬಂದಿದೆ.

ಅಧ್ಯಕ್ಷರು :—ಅದು ನನಗೆ ಗೊತ್ತಿಲ್ಲ. ಇದೇ ಉದ್ಯೋಗ ಬೆಳಗಿನಿಂದ ಸಂಜೆವರೆಗೆ ಮಾಡಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ :—ಒಬ್ಬ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆಂದು ಹೇಳುವಾಗ ಹೀಗೆ ಹೇಳಿದರೆ ಹೇಗೆ? ಮುಖ್ಯ ಮಂತ್ರಿಗಳ ಕೈಗೆ ಅವರು ರೆಸಿಗ್‌ನೇಷನ್ ಲೆಟರ್ ಕೊಟ್ಟಿದ್ದಾರೆ.

ಅಧ್ಯಕ್ಷರು :—ಮುಖ್ಯ ಮಂತ್ರಿಗಳು ನಾಳೆ ಹೇಳುವರು.

ಶ್ರೀ ಎಚ್. ಡಿ ದೇವೇಗೌಡ :—ಅವರು ಒಂದು ವೇಳೆ ರಾಜೀನಾಮೆ ಕೊಟ್ಟರೆ ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ :—ಮುಖ್ಯ ಮಂತ್ರಿಗಳಿಗೆ ಬೇಜಾರಾಗಿ ಅವರೂ ರಾಜೀನಾಮೆ ಕೊಟ್ಟಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಈ ವಿಷಯವನ್ನು ನಾವು ಲಘುವಾಗಿ ಹೇಳುತ್ತಿಲ್ಲ.

ಶ್ರೀ ಎಸ್. ಹಮೀದ್‌ಷಾ :—ಪೇಪರಿನಲ್ಲಿ ಸುದ್ದಿ ಬರಲಿ ಎಂದು ಅವರು ಹೀಗೆಲ್ಲಾ ಹೇಳುತ್ತಿದ್ದಾರೆ, ಇನ್ನೇನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ :—ಪಕ್ಷದಲ್ಲಿ ಮುಖ್ಯ ಮಂತ್ರಿಗಳು ಅಡ್ಜೆಸ್ಟ್ ಮಾಡಿದ್ದಾರೆ, ಅವರಿಗೆ ರೆಸಿಗ್‌ನೇಷನ್ ಲೆಟರ್ ಕಳಿಸಿದ್ದಾರೆ ಎಂದು ನನಗೆ ತಿಳಿದು ಬಂದಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಿಣಿಯವರೇ, ವ್ಯವಸಾಯದ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಅಗ್ರಿಕಲ್ಚರಲ್ ಯೂನಿವರ್ಸಿಟಿ ಬಿಲ್ 1973 ಏನಿದೆ ಅದನ್ನು ಪರಿಶೀಲನೆಗೆ ಸಭೆಯ ಮುಂದಿಡುವಾಗ ಅವರ ಪ್ರಾಸಂಗಿಕವಾದ ಭಾಷಣವನ್ನು ನಾನು ಕೇಳಿದೆ. ಅವರು ಈ ಬಿಲ್ಲಿಗೆ ತ್ವರಿತವಾಗಿ ಮಂಜೂರಾತಿ ಕೊಡಬೇಕು, ಈ ರಾಜ್ಯಕ್ಕೆ ಮತ್ತೊಂದು ವ್ಯವಸಾಯ ವಿಶ್ವವಿದ್ಯಾನಿಲಯವನ್ನು ತರುವ ದೃಷ್ಟಿಯಿಂದ ಈ ಒಂದು ವಿಧೇಯಕವನ್ನು ತಂದಿದ್ದೆ, ಇದಕ್ಕೆ ಯಾವುದೇ ಎಡೆತಡೆಯಿಲ್ಲದೆ ಅನುಮತಿ ಕೊಡುವುದರಿಂದ ವ್ಯವಸಾಯದ ಪ್ರಗತಿಯಾಗುವುದು, ನಿಧಾನವಾದರೆ ಪ್ರಗತಿಗೆ ವಿಳಂಬವಾಗುವುದು,

ಅದನ್ನು ತಡೆಗಟ್ಟಲು ಇಂದೇ ಇದಕ್ಕೆ ಮಂಜೂರಾತಿ ಕೊಡಬೇಕು ಎಂದು ಮಂತ್ರಿಗಳು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಹೇಳಿದರು. ಅವರು ಹಾಗೆ ಹೇಳತಕ್ಕ ಕಾಲದಲ್ಲಿ ಒಂದು ಮಾತನ್ನು ಹೇಳಿದರು. ಯಾರೇ ವಿರೋಧ ಮಾಡಲಿ ಧಾರವಾಡದಲ್ಲಿ ಈ ವಿಶ್ವವಿದ್ಯಾನಿಲಯ ಬಂದೇ ಬರುತ್ತದೆ ಎಂದು ಹೇಳಿದರು. ಇಲ್ಲಿ ಯಾರು ವಿರೋಧಿಸುವರು ಎಂಬುದೇ ಗೊತ್ತಾಗಿಲ್ಲ. ರಾಜ್ಯದ ಪ್ರಗತಿಗೆ ಮತ್ತೊಂದು ವಿಶ್ವವಿದ್ಯಾನಿಲಯವನ್ನು ತರುವಾಗ ಅದನ್ನು ವಿರೋಧಿಸುವ ಪ್ರವೃತ್ತಿ ವಿರೋಧ ಪಕ್ಷಕ್ಕಿಲ್ಲ. ಈ ಭಾವನೆ ನಮ್ಮಲ್ಲಿ ಬೆಳೆಯುವುದು ಬೇಡ. ಧಾರವಾಡದ ಪ್ರದೇಶದಲ್ಲಿರುವ, ಮುಂಬಯಿ ಮತ್ತು ಹೈದರಾಬಾದು ಕರ್ನಾಟಕ ಪ್ರದೇಶದಲ್ಲಿರುವ ಜನರ ಕಲ್ಯಾಣಕ್ಕೆ ಮತ್ತೊಂದು ವಿಶ್ವವಿದ್ಯಾನಿಯುವನ್ನು ಅನುಷ್ಠಾನಕ್ಕೆ ಅತಿ ಜಾಗ್ರತೆ ತರುವಾಗ ಅದಕ್ಕೆ ಧಕ್ಕೆ ಬರುವ ರೀತಿಯಲ್ಲಿ ಯಾರೂ ವಿರೋಧ ಮಾಡನೇಕಾದ ಅವಶ್ಯಕತೆಯಿಲ್ಲ. ಈ ದಿವಸ ಇದನ್ನು ವಿರೋಧಿಸುವುದು ಕೇವಲ ಇದರಲ್ಲಿ ಕೆಲವು ಅಧಿಕಾರಗಳನ್ನು ಪಡೆಯುವುದಕ್ಕೆ ಹೊರಟಿರುವುದರಿಂದ. ಈ ಹೊಸ ಮಸೂದೆಯಲ್ಲಿರುವ ಕೆಲವು ಕಲಮುಗಳನ್ನು ಸ್ವಲ್ಪ ಗಮನಿಸಬೇಕಾಗುವುದು. ಮತ್ತೊಂದು ಮಾತನ್ನು ಹೇಳಿದರು ಇವತ್ತು ಕೆ. ಎಚ್. ಪಾಟೀಲರೇ ಇರಲಿ ಯಾರೇ ಇರಲಿ, ರಾಜ್ಯದ ಕಲ್ಯಾಣಕ್ಕಾಗಿ ಒಂದು ಮಸೂದೆಯನ್ನು ತರುವಾಗ ಇದಕ್ಕೆ ವಿರೋಧವಿರಬಾರದೆಂದು ಹೇಳಿದರು. ಇದು ಪ್ರಗತಿ ಪರವಾದ ಮಸೂದೆ ಎಂದು ಹೇಳಿದರು. ನಾನು ಅವರು ಹೇಳಿದ ಪ್ರತಿಯೊಂದು ಮಾತನ್ನೂ ಉಲ್ಲೇಖ ಮಾಡಬೇಕೆಂದಿಲ್ಲ ಕೆ. ಎಚ್. ಪಾಟೀಲರೇ, ಯಾರೇ ಇರಲಿ ವಿಧೇಯಕಕ್ಕೆ ಅಡ್ಡಿ ಬರಬಾರದೆಂದು ಹೇಳಿದರು. ಅವರ ಪ್ರಾಮಾಣಿಕತೆ ಪ್ರಶ್ನೆ ಮಾಡಬೇಕಾದ ಅವಶ್ಯಕತೆ ಇಲ್ಲ. ಆದರೆ ಪ್ರೋಚಾನ್ಸಲರು ಹೆಚ್ಚು ಅಧಿಕಾರ ಪಡೆಯುವರು ಈ ವಿಧೇಯಕದ ಪ್ರಕಾರ. ಆದುದರಿಂದ ವಿರೋಧಿಸಿದಾಗ ಅನ್ಯಥಾ ಭಾವಿಸಬಾರದು. ಇದನ್ನು ಕಳೆದವಾರ ಮಂಡಿಸಲು ಪ್ರಯತ್ನ ಮಾಡಿದಾಗ ನಾನು ಸಭೆಯಲ್ಲಿರಲಿಲ್ಲ ಆಗ ಸ್ವಲ್ಪ ಪ್ರತಿಭಟನೆ ಬಂದ ವಿಚಾರ ಆಮೇಲೆ ನಾನು ತಿಳಿದುಕೊಂಡೆ. ಈ ಬಿಲ್ಲಿನ ಸ್ವರೂಪದ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದಾರೆ ಅಷ್ಟೇ ಇನ್ನೇನೂ ಇಲ್ಲ. ಮುಖ್ಯ ಮಂತ್ರಿಗಳು ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಈ ಬಿಲ್ಲಿನ ಸ್ವರೂಪವನ್ನು ಬದಲಾಯಿಸುವುದಕ್ಕೆ ಸಿದ್ಧವಾಗಿರುವುದಾಗಿಯೂ, ವಿರೋಧ ಪಕ್ಷದ ಸಲಹೆ ಪಡೆದು ಜಂಟಿ ಸೆಲೆಕ್ಟ್ ಕಮಿಟಿ ಪರಿಶೀಲನೆಯಾದಮೇಲೆ ನಮ್ಮ ಅಭಿಪ್ರಾಯ ತೆಗೆದುಕೊಂಡು ಕೆಲವು ಬದಲಾವಣೆ ಮಾಡಲು ಸಿದ್ಧವಾಗಿರುವುದಾಗಿಯೂ ಹೇಳಿದ ಮೇಲೆ ನಾವು ಒಪ್ಪಿದೆವು. ಇದೊಂದು ಅಟಾನಮಸ್ ಬಾಡಿ ಎಂದು ಹೇಳಿದರು. ಇದು ಸಾಹಿತ್ಯ ಸಂಸ್ಥೆಯೇ ಎಂದು ನಾವು ಪ್ರಶ್ನೆಮಾಡುತ್ತೇನೆ. ಈ ದಿವಸ ಒಂದು ಯೂನಿವರ್ಸಿಟಿ ಮಾಡಬೇಕೆಂದು ಹೇಳುವಾಗ ಅದಕ್ಕಿರುವ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲು ಪ್ರಯತ್ನ ನಡೆದಿದೆ. ಇದರ ಹಿನ್ನೆಲೆಯೇನು ಎಂದು ಕೇಳಬೇಕಾಗಿದೆ. ಹೀಗೆ

(ಶ್ರೀ ಹೆಚ್.ಡಿ. ದೇವೇಗೌಡ)

ಮಾಡಿದರೆ ಇದು ಸ್ವತಂತ್ರ ಸಂಸ್ಥೆಯಾಗಿ ಕೆಲಸವಮಾಡುವುದಕ್ಕೆ ಸಾಧ್ಯವೇ ಎಂದು ಪ್ರಶ್ನೆಮಾಡುತ್ತೇನೆ.

5-30 P.M.

ಶ್ರೀ ಕೆ. ಎಚ್. ಪಾಟೀಲ್ :—ನಾನು ಆಗಲೇ ಹೇಳಿದೆ, ಈ ಸಲದ ಪ್ರೋಗ್ರಾಂ ಆಫ್ ವರ್ಕ್ಸ್ ಮತ್ತು ತಮಗೆ ಗೊತ್ತಿದ್ದಂತೆ ರಿಸರ್ಚ್ ಆಕ್ಟಿವಿಟೀಸನ್ನು ಸರ್ಕಾರದ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನಿಂದ ಅಗ್ರಿಕಲ್ಚರಲ್ ಯೂನಿವರ್ಸಿಟಿ ಟ್ರಾನ್ಸ್‌ಫರ್ ಮಾಡಿದ್ದೇವೆ. ಅಗ್ರಿಕಲ್ಚರಲ್ ಯುನಿವರ್ಸಿಟಿಯೊಳಗೆ ಯಾವ ಯಾವ ಕೆಲಸ ಎಲ್ಲೆಲ್ಲಿ ತೆಗೆದುಕೊಳ್ಳಬೇಕೆಂದು ಹೇಳದೇ ಹೋದರೆ ಹೇಗೆ ಮಾಡುತ್ತಾರೆ? ಯಾರಿಗೆ ಆ ಅಧಿಕಾರ ಇರಬೇಕು ? ಗೌವರ್ನಮೆಂಟಿಗೆ ಇರಬೇಕೇ ಡೈರೆಕ್ಟರ್‌ರವರಿಗೆ ಇರಬೇಕೇ ಎಂದು ಕೇಳುತ್ತೇನೆ. ?

ಶ್ರೀ ಎಚ್ ಡಿ. ದೇವೇಗೌಡ :—ಅಗ್ರಿಕಲ್ಚರಲ್ ಯುನಿವರ್ಸಿಟಿ ಪ್ರೋಗ್ರಾಂ ನಿರೂಪಣೆ ಮಾಡುವುದಕ್ಕೆ ರೀಸರ್ಚ್‌ಗೆ ಸಂಬಂಧ ಪಟ್ಟಹಾಗೆ, ಎಕ್ಸಟೆಷನ್ನಿಗೆ ಸಂಬಂಧಪಟ್ಟಹಾಗೆ ಅವರು ಆಯಾಯಾ ವರ್ಷದ ಒಂದು ಪ್ರೋಗ್ರಾಂ ಮಾಡಿಕೊಳ್ಳುವುದಕ್ಕೆ ಬೋರ್ಡ್ ಆಫ್ ರೀಜಂಟ್ಸಿಗೆ ಸಾಕಷ್ಟು ವಿವೇಕ ವಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ವಿವೇಕ ರಹಿತ ಜನ ಬೋರ್ಡ್ ಆಫ್ ರೀಜೆಂಟ್ಸ್‌ದಲ್ಲಿ ಕೆಲಸ ಮಾಡುತ್ತಾರೆ ಎಂದು ಹೇಳುವುದಕ್ಕೆ ನಾವು ತಯಾರು ಆಗಿಲ್ಲ. ನನ್ನ ಮಿತ್ರರು ಆದ ಹನುಮೇಗೌಡರವರು ಒಂದು ಪ್ರಶ್ನೆ ಎತ್ತಿದರು ಸುಮಾರು 10 ಲಕ್ಷ ರೂಪಾಯಿ ಡೆವಲೆಪ್‌ಮೆಂಟ್ ಗ್ರಾಂಟ್ ನಾರವಾಡ ಕಾಲೇಜಿಗೆ ಡೈವರ್ಟ್ ಮಾಡಬೇಕೆಂದು ತಾವು ಹೇಳಿದಿರಿ. ಇವತ್ತು ಈ ಒಂದು ಅಧಿಕಾರ ಪಡೆಯಲಿಕ್ಕೆ ಹೊರಟಿರತಕ್ಕ ಉದ್ದೇಶ, ಇವತ್ತು ಬೆಂಗಳೂರು ಯುನಿವರ್ಸಿಟಿಯಲ್ಲಿ ಏನು ಹಣವನು ಖರ್ಚು ಮಾಡುತ್ತಾರೆ. ಆ ಹಣವನ್ನು ಕಡಿಮೆ ಮಾಡಿ ಮತ್ತೊಂದು ಯೂನಿವರ್ಸಿಟಿ ಮಾಡುವುದಕ್ಕೆ ಏನು ಪ್ರಯತ್ನ ಮಾಡುತ್ತಿದ್ದೀರಿ. ಅದಕ್ಕೆ ಉಪಯೋಗ ಮಾಡತಕ್ಕಂಥ ಒಂದು ನೀತಿ ಇದು ಎನ್ನುವುದು ಸರ್ವ ವಿಧಿತವಾದದ್ದು ಅದರ ಬಗ್ಗೆ ಎಳ್ಳಷ್ಟೂ ಯಾರೂ ಸಂಶಯ ಪಡಬೇಕಾಗಿಲ್ಲ. ಕೇಂದ್ರದವರು ಇನ್ನೊಂದು ಕೃಷಿ ವಿಶ್ವವಿದ್ಯಾನಿಲಯ ಮಾಡುವುದಕ್ಕೆ ಹಣ ಕೊಡುವುದಾದರೆ ಅದಕ್ಕೆ ಯಾರದೂ ಅಡ್ಡಿಯಿಲ್ಲ. ಬೆಂಗಳೂರು ಯೂನಿವರ್ಸಿಟಿಗೆ ಖರ್ಚು ಮಾಡುವ ಹಣವನ್ನು ಮೊಟಕು ಮಾಡಿ ಮತ್ತೊಂದು ಕಡೆ ಒಯ್ಯಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಬೆಂಗಳೂರು ಯೂನಿವರ್ಸಿಟಿಯ ಹಣವನ್ನು ಮತ್ತೊಂದು ಯೂನಿವರ್ಸಿಟಿಗೆ ತೆಗೆದುಕೊಂಡು ಹಾಕುವ ಅಧಿಕಾರ ಏನು ಇದೆ ಅದನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವ ಉದ್ದೇಶ ಏನು ಇದೆ ಅದು ಹೇಯವಾದದ್ದು ಎಂದು ಹೇಳುತ್ತೇನೆ. ಅದರ ಜೊತೆಗೆ ಬೋರ್ಡ್ ಆಫ್ ರೀಜಂಟ್ಸಿಗೆ

ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಅವಕಾಶವನ್ನು ಈ ವಿಧೇಯಕದಿಂದ ಕಸಿದುಕೊಳ್ಳುವುದಕ್ಕೆ ಹೊರಟಿದ್ದೀರಿ. ಅದು ಯೋಗ್ಯವಾದದ್ದು ಅಲ್ಲ ಆ ಅಧಿಕಾರ ಯೂನಿವರ್ಸಿಟಿಗೆ ಬಿಡಬೇಕು, ಯೂನಿವರ್ಸಿಟಿಗಳು ಸ್ವಂತವಾಗಿ ತಮಗೆ ಇದ್ದಂಥ ಶಕ್ತಿಯಿಂದ ಯಾರ ಹಸ್ತಕ್ಷೇಪವೂ ಇಲ್ಲದೆ ಕೆಲಸ ಮಾಡುವುದಕ್ಕೆ ನಾವು ಅವರಿಗೆ ಅವಕಾಶ ಮಾಡಿಕೊಡಬೇಕು. ಇನ್ನು ಒಂದು ಮಾತು ಹೇಳುತ್ತೇನೆ. ಇದನ್ನು ಯೂನಿವರ್ಸಿಟಿ ಎಂದು ಕರೆಯಬೇಕಾಗಿಲ್ಲ.

You call it a Government institution. I do not mind if you want to take all these powers. But if you suspect the bonofides of this board or if you suspect the bonafides of the syndicate, you call it a Government institution instead of an University. Is it an autonomous body. It cannot be an autonomous body in this present way in which the Minister has brought this Bill.

ಇವತ್ತು ಇದರ ಸ್ವರೂಪ ಹಾಗೆ ಇದೆ. ಸೆಕ್ಷನ್ 12 (2) ರಲ್ಲಿ ಹೀಗೆ ಹೇಳಿದೆ.

* "Section 12 (2). The Vice Chancellor shall be appointed by the Chancellor in consultation with the Pro-Chancellor".

In the Present Act :

From a panel of three persons recommended by a committee of experts" ಎಂದು ಇದೆ.

ಶ್ರೀ ಕೆ. ಎಚ್. ಪಾಟೀಲ್.—ಮೊದಲು ಪ್ರೋ ಚಾನ್ಸಲರ್ ಪ್ರಿಸೈಡ್ ಮಾಡಬೇಕಿತ್ತು ಅವರು ಕಳುಹಿಸಿದಂಥ ಪ್ರೊಸೀಡಿಂಗ್ಸ್ ನೋಡಿ ಚಾನ್ಸಲರ್ ನೇಮಕ ಮಾಡುತ್ತಿದ್ದರು. ಅವರು ರೆಕಮೆಂಡೇಷನ್ ಕೇಳುತ್ತಾರೆ. ಇದರೊಳಗೆ ಅದು ಸಹ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲಿ ಇದರ ಅರ್ಥ ಏನು ಆಗುತ್ತದೆ ಎಂದರೆ ಪ್ರೋ ಚಾನ್ಸಲರ್ ಅಧಿಕಾರ ಏನು ಇದೆ ಅದು ಪ್ರಿವೇಲ್ ಆಗುತ್ತದೆ. ನನ್ನ ಒಂದು ಅಭಿಪ್ರಾಯ, ತಮ್ಮ ಪ್ರಭಾವವನ್ನು ಆ ಕಮಿಟಿಯ ಮೇಲೆ ಬೀರತಕ್ಕದ್ದಕ್ಕೆ ಅವಕಾಶ ಆಗಬಾರದು.

ಶ್ರೀ ಕೆ. ಎಚ್ ಪಾಟೀಲ್. _ವೈಸ್ ಚಾನ್ಸಲರ್ ಅಪಾಯಿಂಟ್‌ಮೆಂಟ್ ಪ್ರೋ ಚಾನ್ಸಲರ್, ಗೌರ್ನಮೆಂಟ್ ಕೇಳದೇ ನೇಮಕ ಮಾಡಬೇಕೆಂದು ನಿಮ್ಮ ಅಭಿಪ್ರಾಯವೇ ?

ಶ್ರೀ ಎಚ್. ಡಿ. ದೇವೇಗೌಡ.__ಕೇಳದೇ ಮಾಡಬೇಕಾಗಿಲ್ಲ, ಎಕ್ಸ್‌ಪರ್ಟ್ ಕಮಿಟಿ ಏನು ಇದ್ದಾರೆ ಅವರಿಗೆ ಇಂಡಿಪೆಂಡೆಂಟ್ ಡಿಸಿಷನ್ ತೆಗೆದುಕೊಳ್ಳುವುದಕ್ಕೆ ಬಿಡಬೇಕು. ಎಕ್ಸ್‌ಪರ್ಟ್ಸ್ ಕಮಿಟಿ ಕೊಟ್ಟ ತೀರ್ಮಾನವನ್ನು ಕೂಡ ಚಾನ್ಸಲರ್ ಒಪ್ಪತಕ್ಕದ್ದು ಅಥವಾ ಅದರಿಂದ ಡಿಫರ್ ಆಗತಕ್ಕದ್ದು ಮತ್ತು ರಾಜ್ಯ ಸರಕಾರ ದವರು ತಿಳಿಸತಕ್ಕ ಅಭಿಪ್ರಾಯ ಏನು ಇದೆ ಅದನ್ನು ಚಾನ್ಸಲರ್ ಒಪ್ಪಬೇಕೇ ಅಥವಾ ಬೇಡವೇ ಎನ್ನುವುದು ಅವರಿಗೆ ಸಂಬಂಧಪಟ್ಟಂಥ ವಿಷಯ. It is only advisory in nature. In cannot be binding on Chancellor to appoint Vice Chancellor on the recommendation of the Pro-Chancellor. It should be only in the form of advisory in nature. The Chancellor must have freedom to select the best man out of the panel.

ಇದು ಇರಬೇಕೇ ಪರಂತು it cannot be binding. I am not going to concede such a proposal. Recommendation to the Government ಎಂದು ಹಳೇ ಆಕ್ಟನಲ್ಲಿದೆ ತಾವು ಏನು ಮಾಡಿದಿರಿ ಅದನ್ನು ಪ್ರೋ ಚಾನ್ಸಲರ್‌ಗೆ ಹಾಕಿಕೊಂಡಿದ್ದೀರಿ, ಅದು ಕೂಡ ಸರಿಯಾದ್ದು ಅಲ್ಲ. ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಇದನ್ನು ಆಲೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

Sub-section (6) ಹೀಗೆ ಹೇಳಿದೆ "Emoluments and other service conditions of the Vice-Chancellor shall be such as may be determined by the Pro-Chancellor".

It should not be with the Pro-Chancellor ಅದೂ ಸರಿಯಾದುದು ಅಲ್ಲ you go to Section 13 (7).

ಶ್ರೀ ಕೆ. ಎಚ್. ಪಾಟೀಲ್.--ಬೋರ್ಡಿನವರು ಮಾಡಬೇಕಾದರೆ ತಡವಾಗುತ್ತದೆ. ಆದುದರಿಂದ Pro-Chancellor may take a decession ಎಂದು ಇರುವುದು ವಾಡಿಕೆ.

H. D. Devegowda.—You want to snatch away that power also.

ಕೇವಲ ಪ್ರೋಚಾನ್ಸಲರ್ ಪವರ್ಸ್ ತೆಗೆದುಕೊಳ್ಳತಕ್ಕದ್ದು ಒಂದೇ ಅಲ್ಲ ಪ್ರತಿ ಹೆಜ್ಜೆಯಲ್ಲಿಯೂ, ಪ್ರತಿ ಹಂತದಲ್ಲಿಯೂ ನಿಮ್ಮ ಹೊಣೆಯಿದ್ದು ಇವತ್ತು ಯೂನಿವರ್ಸಿಟಿಯು ಕೆಲಸ ಮಾಡಬೇಕಾಗಿದೆ. ಇದನ್ನು ನಾವುಗಳು ವಿರೋಧ ಮಾಡಿದರೆ, ನಾವು ರೀ–ಆಕ್ಷನರೀಸ್ಸ್ ಎಂದು ಕರೆಯುವುದಕ್ಕೆ ಹೋಗಬೇಡಿ. ತಾವು ಇದನ್ನು ಪ್ರೋಗ್ರೆಸ್ಸೀವ್ ಲೆಜಿಸ್ಲೇಷನ್ ಎಂದು ಬೆನ್ನು ತಟ್ಟಿಕೊಂಡು ಮಾತನಾಡಿದಿರಿ. ತಮ್ಮ ಒಂದು ಹಿಡಿತದಲ್ಲಿ ಅಧಿಕಾರವನ್ನು ತೆಗೆದುಕೊಳ್ಳತಕ್ಕದ್ದು ಪ್ರೊಗ್ರೆಸ್ಸೀವ್ ಲೆಜಿಶ್ಲೇಷನ್ನೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಹೇಳಿದಿರಿ, ಒಕ್ಕಲತನದ ಖಾತೆ ಅಭಿವೃದ್ಧಿಗಾಗಿ ಅಂಥ ಒಂದು ಅಧಿಕಾರವನ್ನು ಪ್ರೋಚಾನ್ಸಲರ್ ಪಡೆಯುವುದರಿಂದ ಒಕ್ಕಲುತನದ ಖಾತೆ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ಒಕ್ಕಲು ತನದ ಖಾತೆಯು ಅಭಿವೃದ್ಧಿ, ಒಬ್ಬ ವ್ಯಕ್ತಿಯಲ್ಲಿ ಅಧಿಕಾರ ವನ್ನು ಸಂಗ್ರಹಣೆ ಮಾಡಿ, ಒಬ್ಬ ಮಂತ್ರಿಯ ಕೈಯಲ್ಲಿ ಅಧಿಕಾರವನ್ನು ಕೇಂದ್ರೀಕೃತ ಮಾಡುವುದರಿಂದ, ಆಗುತ್ತದೆಯೇ ? ಈ ಒಂದು ಪ್ರಿ ಅಂಬಲ್‌ನಲ್ಲಿ ನಾನು ಕೆಲವು ವಿಷಯಗಳನ್ನು ಪ್ರಸ್ತಾಪಮಾಡುತ್ತಾ ಇದ್ದೇನೆ. ತಾವು ಈ ಒಂದು ದೃಷ್ಟಿ ಕೋನದಿಂದ ಈ ಬಿಲ್ಲಿಗೆ ಒಪ್ಪಿಗೆಯನ್ನು ಪಡೆಯುವುದಕ್ಕೆ ಪ್ರಯತ್ನಪಡಬಾರದು. ತಮ್ಮಲ್ಲಿ ಈ ಒಂದು ಅಧಿಕಾರ ಕೇಂದ್ರಿಕೃತವಾದರೆ ಒಕ್ಕಲುತನ ಖಾತೆಯು ಅಬಿವೃದ್ಧಿ ಆಗುತ್ತದೆಯೇ ? ಇಂಥ ಒಂದು ಭಾವನೆಯನ್ನು ತಾವು ತಳೆದಿರುವುದು ಸರಿಯಾದುದು ಅಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ರಾಜ್ಯದ ಕಲ್ಯಾಣಕ್ಷೇತ್ರದ ಸರ್ಕಾರಕ್ಕೆ ಎಷ್ಟು ಕಾತುರತೆ ಇದೆಯೋ ಅಷ್ಟೆ ಕಾತುರತೆ ವಿರೋಧ ಪಕ್ಷಗಳಿಗೂ ಇದೆ ಎಂಬುದನ್ನು ತಾವು ಮರೆಯಬಾರದು. ಈ ದಿಸೆಯಲ್ಲಿ ಯಾವುದೇ ಒಂದು ಕಾರ್ಯ ಹಿಂದೆ ಬಿದ್ದು ಹೋಗುವುದಿಲ್ಲ. ಎಂಬು ದನ್ನು ತಾವು ಅರಿಯಬೇಕಾಗುತ್ತದೆ. ಇವತ್ತು ಈ ಯೂನಿವರ್ಸಿಟಿಯಲ್ಲಿ ಅಡ್ಮಿಷನ್ ಬಗ್ಗೆ ಏನು ಗೊಂದಲ ಇದೆ ಅದನ್ನು ನಿವಾರಣೆ ಮಾಡುವುದಕ್ಕೆ ಆಜ್ಞೆ ಮಾಡಿದ್ದೀರಿ ಎಂದು ತಿಳಿಸಿದಿರಿ, ನಾನು ಕೇಳುತ್ತೇನೆ. ಅಡ್ಮಿಷನ್‌ಲ್ಲಿ ಕ್ಲಾಜ್ 5, ಅದಕ್ಕೆ ಕಂಪ್ಯಾರೇಟಿವ್ ಫಿಗರ್ಸ್ ಕೊಡುವುದಕ್ಕೆ ಹೋಗುವುದಿಲ್ಲ. ಸಬ್ ಸೆಕ್ಷನ್ 2 ರಲ್ಲಿ Subject to the provisions to sub-section (1), the State Government may direct that the Uuiversity shall reserve in college seats for women, the Scheduled Castes and the Scheduled Tribes, and such socially and educationally backward classes of citizenes as may be declared by the State Government in this behalf, and where such direction has been given, the University shall make the reservation accordingly ಎಂದು ಇದೆ. ಕಳೆದ ಸಾರಿ ಏನು ಹೇಳಿದ್ದೀರಿ ಎಂದರೆ, ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕ ಮಕ್ಕಳಿಗೆ ಮೆರಿಟ್‌ನ ಆಧಾರದ ಮೇಲೆ ಸೀಟು ನಿರ್ಣಯ ಮಾಡುವುದು ಸರಿಯಲ್ಲ, ಸಾಮಾಜಿಕ ನ್ಯಾಯ ದೊರಕಿಸಬೇಕಾದರೆ ಅಂಕಗಳ ಆಧಾರದ ಮೇಲೆ ತೀರ್ಮಾನ ಕೈಗೊಳ್ಳ

(ಶ್ರೀ. ಹೆಚ್ ಡಿ. ದೇವೇಗೌಡ)

ತಕ್ಕದ್ದು ಸರಿಯಲ್ಲ ಎನ್ನುವ ಮಾತನ್ನು ಹೇಳಿದ್ದಿರಿ. ಇವತ್ತು ನಾನು ಕೇಳುತ್ತೇನೆ, ಈ ಆಕ್ಟಿನಲ್ಲಿ ಕ್ಲಾಜ್ 5(1) ಸೆಕ್ಷನ್ ಏನು ಇದೆ, ಸಬ್ ಸೆಕ್ಷನ್ 2 ಏನು ಇದೆ ಇದರ ಬಗ್ಗೆ ತಾವು ಸ್ಪಷ್ಟೀಕರಣ ಮಾಡಬೇಕು ಎಂದು. ಮತ್ತು ವ್ಯವಸಾಯಗಾರರ ಮಕ್ಕಳಿಗೆ ಸೀಟು ಕೊಡುವಾಗ ವ್ಯವಸಾಯದಲ್ಲಿ ವಿದ್ಯಾರ್ಥಿಗಳಿಗೆ ಇರುವ ಅನುಭವ, ವಿದ್ಯಾರ್ಹತೆ ಇವುಗಳನ್ನು ಪರಿಗಣಿಸಬೇಕು ಎಂದು ಇದೆ. ಸಬ್ ಸೆಕ್ಷನ್ 2, ಹಳೆಯ ಆಕ್ಟ್‌ನಲ್ಲ ಇದರ ಬಗ್ಗೆ ಪ್ರಾವಿಷನ್ ಮಾಡಿಕೊಳ್ಳುವುದಕ್ಕೆ ಈ ಸಭೆ ಮಂಜೂರಾತಿ ಕೊಟ್ಟಿದೆ ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ಈ ಒಂದು ಹೊಸ ವಾಕ್ಯ ಈ ಬಿಲ್‌ನಲ್ಲಿ ಬೇಕಾಗಿಲ್ಲ. ಹಳೆಯ ಆಕ್ಟ್ ಏನು ಇದೆ ಅದರ ಕಕ್ಷೆಯೊಳಗೆ ಇದನ್ನು ತರುವುದಕ್ಕೆ ಸಾಧ್ಯವಿದೆ ಎಂದು ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಇದರ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ, ಏಕೆಂದರೆ ನನ್ನ ಭಾಷಣವನ್ನು ಆರು ಗಂಟೆಯಾಗುವುದರೊಳಗೆ ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ಆದ್ದರಿಂದ ನಾನು ಈ ಪ್ರೋಚಾನ್ಸಲರ್ ಪಾಯಿಂಟಿಗೆ ನೇರವಾಗಿ ಬರುತ್ತೇನೆ. ಆಗಲೇ ನಾನು ಹೇಳಿದೆ, ಅಲ್ಲಿ ಪ್ರೋಚಾನ್ಸಲರ್ ಅನ್ನು ಗವರ್ನರ್ ಎಂದು ಹಾಕಬಹುದು ಎಂದು ಮೊದಲು ಇದ್ದಂಥ ಚಾನ್ಸಲರ್ ಇರಲಿ ಮಹಾರಾಷ್ಟ್ರ ಯೂನಿವರ್ಸಿಟಿಯೊಳಗೆ ಸಹ ಪ್ರೋಚಾನ್ಸಲರ್‌ಗೆ ಏನು ಪ್ರಾವಿಷನ್ ಕೊಟ್ಟಿದ್ದಾರೆ ? ಅಲ್ಲೂ ಆ ಬೇಸಿಸ್ ಮೇಲೆ ಮಾಡಿದ್ದಾರೆ.

SRI K. H. PATIL ; I am not keen to retain that power, that Pro-Chancellorship, I make it most clear to you that I may accept that suggestion. Please tell me with what authority you want to vest this with ?

ಶ್ರೀ ಎಚ್. ಡಿ. ದೇವೇಗೌಡ : ಇವತ್ತು ಮಂತ್ರಿಗಳು ಏನು ಒಂದು ಗೆಶ್ಚರ್ ತೋರಿಸಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಸರಕಾರ ವಿರೋಧಪಕ್ಷದವರು ಕೊಡತಕ್ಕ ಅಭಿಪ್ರಾಯವನ್ನು ಒಪ್ಪುವುದಕ್ಕೆ ಸಿದ್ಧವಿದೆ ಎನ್ನುವುದನ್ನು ನಾನು ಸ್ವಾಗತ ಮಾಡುತ್ತೇನೆ. ಪ್ರೋಚಾನ್ಸಲರ್ ಶ್ರೀ ಕೆ. ಎಚ್. ಪಾಟೀಲರು ಎಂದು ತಿಳಿದುಕೊಂಡು ನಾನು ಹೇಳುತ್ತಾ ಇಲ್ಲ, ಇವತ್ತು ನೀವು ಇರುತ್ತೀರಿ, ನಾಳೆ ಇನ್ನೊಬ್ಬರು ಬರುತ್ತಾರೆ, ಈ ಒಂದು ವಿಧೇಯಕಕ್ಕೆ ಈ ಸಭೆ ಮಂಜೂರಾತಿ ಕೊಟ್ಟ ಮೇಲೆ, ಈ ವಿಧೇಯಕದಿಂದ ಒಂದು ಅಘಾತವಾಗತಕ್ಕ ಪರಿಸ್ಥಿತಿಯನ್ನುಂಟುಮಾಡಬಾರದು ಎನ್ನುವ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿದ್ದೇನೆ. 1963ರ ಯೂನಿವರ್ಸಿಟಿ ಆಕ್ಟಿಗೂ, 1973ರ ಆಕ್ಟಿಗೂ ಇರುವ ವ್ಯತ್ಯಾಸವನ್ನು ಈ ಸಭೆಯ ಗಮನಕ್ಕ ತರುತ್ತೇನೆ. ಇದನ್ನು ಜಾಯಿಂಟ್

ಸೆಲೆಕ್ಟ ಸಮಿತಿಯವರು ಪರಿಶೀಲನೆ ಮಾಡುವುದು ಉಚಿತ ಮತ್ತು ಯೋಗ್ಯ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಸೆಕ್ಷನ್ 11(3)ರಲ್ಲಿ The Pro-Chancellor may call for his information any papers relating to the administration of the affairs of the University from any officer of the University other than the Chancellor and such requistion shall be complied with ... such officer. The Pro-chancellor after perusing the papers so called for may give such directions in respect of any proceeding of the Universitiy to the administration of the affairs of the University other than the academic affairs which is not in conformity with the Act, the Statutes, and regulations, as he deems necessary and such directions shall be comolied with' ಎಂದು ಇದೆ. ಬಹುಶಃ ಇವತ್ತು ಇದರ ಬಗ್ಗೆ ನಾನು ಒಂದು ಮಾತನ್ನು ಹೇಳುವುದಾದರೆ, ಪ್ರೋಚಾನ್ಸಲರ್ ಪವರ್ ಏನಾಗುತ್ತದೆ ಎಂದರೆ, ಎಲ್ಲಾ ದೃಷ್ಟಿಯಿಂದಲೂ ನೋಡಿದರೆ ಅವರು ಡಿಕ್ಟೇಟರ್ ಎಂದು ಹೇಳಬಹುದು. ಯಾರೂ ಅವರನ್ನು ಪ್ರಶ್ನಿಸಲಾರದಂಥ ಸರ್ವಾಧಿಕಾರಿ. ಅವರು ಏನು ಬೇಕಾದರೂ ಮಾಡಬಹುದು. ವೈಸ್ ಚಾನ್ಸಲರ್ ಅವರಿಗೆ ಪ್ರೈಮರಿಸ್ಕೂಲ್ ಮಾಡುವುದಕ್ಕೆ ಪವರ್ಸ್ ಕೊಡಿ, ನನ್ನದೂ ಏನೂ ವಿರೋಧವಿಲ್ಲ. ಅವರು ಪ್ರೈಮರಿ ಸ್ಕೂಲು ಮಾಡಿದರೆ ಏನಾಯಿತು? ಎಂದು ಹೇಳಿದರೆ, ಅವರಿಗೂ ಸ್ವಲ್ಪ ಗೌರವ ಇದೆ. ಇದಕ್ಕಿಂತ ಕೆಳಮಟ್ಟದ ಕೆಲಸವನ್ನು ಈ ಪರಿಸ್ಥಿತಿಯಲ್ಲಿ ಅವರು ಮಾಡಬೇಕು. ಪ್ರೋಚಾನ್ಸಲರ್‌ಗೆ ಜೋ ಹುಕುಂ ಎಂದು ನಮಸ್ಕಾರ ಮಾಡಿಕೊಂಡು, ಅವರ ಮನಸ್ಸಿಗೆ, ಅವರ ಇಚ್ಛೆಗೆ ಅನುಸಾರವಾಗಿ ನಡೆಯತಕ್ಕ ರೀತಿಯಲ್ಲಿ ನಡೆಯಬೇಕು. ಚಾನ್ಸಲರ್‌ಗೆ ಇರುವ ಪವರ್ಸ್ ಅನ್ನು ಕಿತ್ತು ಹಾಕಿದ್ದಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, "The annual programme of work of the University shall be referred to the Pro-Chancellor" ಎಂದು ಹೇಳಿದ್ದಾರೆ. ಇದು ಹಿಂದಿನ ಆಕ್ಟಿನಲ್ಲಿ ಇಲ್ಲ. ಇನ್ನೂ ಎಲ್ಲಿಯವರೆಗೆ ಹೋಗಿದ್ದಾರೆ. ಎಂದರೆ ಯೂನಿವರ್ಸಿಟಿ ಬೋರ್ಡ್ ಆಫ್ ರಿಜೆಂಟ್ಸ್ ಅನ್ನು ಕೂಡ ಕಥಂ ಮಾಡುವುದಕ್ಕೆ ಹೊರಟಿದ್ದಾರೆ. ಬೋರ್ಡ್ ಆಫ್ ರಿಜೆಂಟ್ಸ್‌ಗೆ ಸಭೆಯನ್ನು ಕಾನ್ಸ್‌ಟಿಟ್ಯೂಟ್ ಮಾಡುವುದಕ್ಕೆ ಸಭೆಯ ಬೇರೆ ಬೇರೆ ಅಂಗಗಳಲ್ಲಿ ಇವರಿಗೆ ಏನು ಒಂದು ಅಧಿಕಾರ ಇದೆ ಅದಕ್ಕೂ ಕತ್ತರಿ ಪ್ರಯೋಗ ಮಾಡಿದ್ದಾರೆ.

By this legislative measure the Government wants to take away the power of the Chancellor The Chancellor can give an independent judgment. There are instances where the Chancellor has turned down the proposal of the

(ಶ್ರೀ ಎಚ್. ಡಿ. ದೇವೇಗೌಡ)

Syndicate. The Syndicate is not a supreme body. It can commit mistakes and if such mistakes are pointed out to the Chancellor by the aggrieved person, he can consider them and take an independent decision. So, it is not correct to give this power to the Pro-Chancellor.

ಆ ಮೇಲೆ ಹೀಗೆಯೇ ಸಬ್ ಕ್ಲಾಸ್ (9) ರಲ್ಲಿ ಪ್ರೊ-ಛಾನ್ಸಲರ್ ಪವರನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಛಾನ್ಸಲರ್ ಬದಲಿಗೆ ಪ್ರೊ-ಛಾನ್ಸಲರ್ ಹಾಕಿದ್ದಾರೆ. ಮಾನ್ಯ ಕೆ. ಎಚ್. ಪಾಟೀಲರು ಛಾನ್ಸಲರನ್ನು ಮರೆತ ಹಾಗಿದೆ. ಸಬ್ ಸೆಕ್ಷನ್ 9ನ್ನು ಡಿಲೀಟ್‌ಮಾಡಿ ಛಾನ್ಸಲರಿಗೆ ಪವರ್ ಇರತಕ್ಕದ್ದು ಒಳ್ಳೆಯದು.

Sub-clause (11) of clause 13 provides :

> "The *vice*-Chancellor shall be responsible for the proper administration of the University and for a close co-ordination and integration of teaching, research and extension education and shall act according to the direction given by the Chancellor or the Pro-Chancellor".

Why do you add the words 'or the Pro-Chancellor'?

SRI K. H. PATIL.—It is not an academic subject

SRI H. D. DEVE GOWDA.—What is the depth of knowledge of a legislator in regard to research activities?

SRI K. H. PATIL.—What is the meaning of knowledge?

ಶ್ರೀ ಎಚ್. ಡಿ. ದೇವೇಗೌಡ.—ನಾಲೆಡ್ಜ್ ಎನ್ನುವ ಬಗ್ಗೆ ಆಕ್ಸ್‌ಫರ್ಡ್ ಡಿಕ್ಷನರಿ ತೆಗೆದು ನೋಡಿ. ರಿಸರ್ಚ್ ಆಕ್ಟಿವಿಟಿ ಅಥವಾ ವಿದ್ಯಾ ಅರ್ಹತೆ ಮೇಲೆ ಪ್ರೋಚಾನ್ಸಲರ್ ಅಥವಾ ಮಂತ್ರಿಗಳನ್ನು ನೇಮಕ ಮಾಡುವುದಿಲ್ಲ.

ಶ್ರೀ ಕೆ. ಎಚ್ ಪಾಟೀಲ್.—ಅದನ್ನು ಹೇಳುವುದಾದರೆ, ಛಾನ್ಸಲರ್‌ನ್ನು ಅದೇ ಆಧಾರದ ಮೇಲೆ ನೇಮಿಸುತ್ತಿರಾ? ಅನೇಕ ಜನ ನಾನ್‌ಕ್ವಾಲಿಫೈಡ್ ಜನರನ್ನು ನೇಮಿಸಿದ ಉದಾಹರಣೆ ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಏನು ಪ್ರಶ್ನೆ ಕೇಳಿದಿರಿ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ. ವಿದ್ಯಾರ್ಹತೆ ಇಟ್ಟುಕೊಳ್ಳದೆ ಛಾನ್ಸಲರ್ ನೇಮಕಮಾಡತಕ್ಕದು ನನ್ನ ನೋಟೀಸಿಗೆ ಬಂದಿಲ್ಲ. ಯಾರಾದರೂ ಪ್ರೈಮರಿ ಸ್ಕೂಲ್ ಓದಿದಂಥ ಗವರ್ನರ್‌ನ್ನು ಛಾನ್ಸಲರ್ ಮಾಡಿದ್ದಾರೆಯೇ ?.

ಶ್ರೀ ಕೆ. ಎಚ್. ಪಾಟೀಲ್.—ನಾನು ರೀಸರ್ಚ್ ಬಗ್ಗೆ ಮಾತನಾಡುತ್ತಾ ಇರುವುದು.

ಶ್ರೀ ಎಚ್. ಡಿ. ದೇವೇಗೌಡ.—ಗವರ್ನರುಗಳನ್ನು ರಾಷ್ಟ್ರದಲ್ಲಿ ನೇಮಕ ಮಾಡುವಾಗ ಸಾಕಷ್ಟು ಅರ್ಹತೆ ಇರತಕ್ಕವರನ್ನು ನೇಮಕ ಮಾಡುತ್ತಾರೆ ಎಂದು ತಿಳಿದುಕೊಳ್ಳುತ್ತೇನೆ. ಒಂದು ವೇಳೆ ರಾಜಕೀಯ ಒತ್ತಡದಲ್ಲಿ ಯಾರಾದರೂ ಪ್ರೈಮರಿ ಸ್ಕೂಲ್ ಓದಿದವರನ್ನು ಗವರ್ನರ್ ಮಾಡಿದ್ದರೆ, ಅದಕ್ಕೆ ವಿಷಾದ ಪಡಬೇಕಾಗಿದೆ. ಅದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಪಕ್ಷದ ಅಧಿಕಾರ ಅಥವಾ ಬೇರೆ ಯಾವುದೇ ಆಗಲಿ ಅದರ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಿಲ್ಲ. The Minister will act as a Pro-Chancellor. ವಿದ್ಯಾರ್ಹತೆ ಪ್ರಶ್ನೆ ಮುಖ್ಯವಲ್ಲ. ಮಂತ್ರಿ ಯಾಗುವುದಕ್ಕೆ ಅನೇಕ ಕಾರಣಗಳಿವೆ. ಆ ಒಂದು ಸನ್ನಿವೇಶದಲ್ಲಿ ನೋಡುವುದಾದರೆ ರೀಸರ್ಚ್ ಆಕ್ಟಿವಿಟೀಸ್ ಬಗ್ಗೆ ನಿರ್ಧಾರವನ್ನು ಕೊಡತಕ್ಕದ್ದಕ್ಕೆ ಪ್ರೊಛಾನ್ಸಲರ್‌ಗೆ ಕಷ್ಟ ಆಗಬಹುದು. ಶ್ರೀ ಕೆ. ಎಚ್. ಪಾಟೀಲರಿಗೆ ಹೆಚ್ಚಿಗೆ ಮಾಹಿತಿ ಇರಬಹುದು. ಡಬಲ್ ಡಿಗ್ರಿ ತೆಗೆದು ಕೊಂಡಿರುವವರು ಎಲ್ಲಾ ಮಹಾ ಬುದ್ಧಿವಂತರು ಎಂದು ನಾನು ವಾದ ಮಾಡಲಿಲ್ಲ. ಹೆಚ್ಚಿಗೆ ಜ್ಞಾನ, ಅನುಭವ ಇರಬೇಕು. ಅನುಭವ ಪಡೆದಿರುವವರು ಎಲ್ಲಾ ಕಾಲದಲ್ಲೂ ವ್ಯವಸಾಯ ಮಂತ್ರಿಗಳಾಗಲೂ ಸಾಧ್ಯವಿಲ್ಲ. ಆದುದರಿಂದ ಇಂಥ ಒಂದು ಅಧಿಕಾರವನ್ನು ನೀವು ತೆಗೆದುಕೊಳ್ಳಲಿಕ್ಕೆ ಹೊರಟಿರತಕ್ಕದ್ದು ಉಚಿತ ವಲ್ಲ. ರೀಸರ್ಚ್ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದು ಆಗಲೀ ಮತ್ತೆ ಯೂನಿವರ್ಸಿಟಿ ಒಳ ವ್ಯವಹಾರದಲ್ಲಿ ಯಾವುದೇ ಒಂದು ನಿರ್ಣಯ ತೆಗೆದುಕೊಳ್ಳುವುದಾಗಲೀ ಅದಕ್ಕೆ ಛಾನ್ಸಲರ್ ಮತ್ತು ಬೋರ್ಡ್ ಆಫ್‌ರೀಜಂಟ್ಸ್‌ನ್ನು ಬದ್ಧ ಮಾಡೋಣ. ಬೋರ್ಡ್ ಆಫ್‌ರೀಜಂಟ್ಸ್ ಒಂದು ವೇಳೆ ಅನ್ಯಾಯ ಮಾಡಿದರೆ ಅಂಥ ಅನ್ಯಾಯವನ್ನು ಸರಿಪಡಿಸಲಿಕ್ಕೆ ವೈಸ್—ಛಾನ್ಸಲರಿಗೆ ಆಗಲೀ, ಛಾನ್ಸಲರಿಗಾಗಲೀ ಬಿಡೋಣ. ನೀವು ಕೈ ಹಾಕಲಿಕ್ಕೆ ಹೋಗುವಂಥಾದ್ದು ಯೋಗ್ಯವಲ್ಲ ಎಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆ ಪಡುತ್ತೇನೆ ಮುಂದು ಹೋಗಿ ಡೀನ್ ವ್ಯವಹಾರದಲ್ಲಿ ಕೂಡ ಕೈ ಹಾಕಲು ಪ್ರಯತ್ನ ಪಟ್ಟಿದ್ದೀರಿ.

> "The Dean shall be a whole time officer by the University and shall be appointed by the Pro-Chancellor in consultation with the *vice*-Chancellor":

(ಶ್ರೀ ಎಚ್. ಡಿ. ದೇವೇಗೌಡ)

Again, the words 'Pro-Chancellor' have been inserted here. ಇಲ್ಲಿ ಚಾನ್ಸಲರ್ ಹೆಸರೇ ಇಲ್ಲ. ಕಾನ್‌ವೊಕೇಷನ್‌ಗೆ ದಿನಾ ಹೋಗಿ ಕರೀಗೌನ್ ಹಾಕಿಕೊಂಡು ಕೂತುಕೊಳ್ಳುವುದು ಮಾತ್ರ ಛಾನ್ಸಲರ್ ಕೆಲಸವೋ, ಏನೋ ಗೊತ್ತಿಲ್ಲ. ಇಲ್ಲಿ ಛಾನ್ಸಲರ್ ಪ್ರಶ್ನೆಯೇ ಇಲ್ಲ. ಎಲ್ಲಾ ಪ್ರೋ ಛಾನ್ಸಲರ್. ನಾನು ಮೊದಲೇ ಹೇಳಿದ್ದೇನೆ. ಇವತ್ತು ಕೆ. ಎಚ್. ಪಾಟೀಲರು ಇರಬಹುದು, ಹೋಗಬಹುದು. ಅದೇ ದೃಷ್ಟಿಯಿಂದ ಇದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ಇದಕ್ಕಾಗಿ ಇವತ್ತು ತಮ್ಮ ಒಂದು ಔದಾರ್ಯಕ್ಕೆ ನಾವು ಸ್ವಾಗತ ಮಾಡುತ್ತೇವೆ. ಹಾಗೆ ಇವತ್ತು ಸೆಕ್ಷನ್ 15ರಲ್ಲಿ ಕೂಡ ಅಧಿಕಾರವನ್ನು ನಿಮ್ಮ ಕೈಯಲ್ಲಿ ತೆಗೆದುಕೊಂಡಿದ್ದೀರಿ. ರಿಜಿಸ್ಟ್ರಾರ್ ಅಪಾಯಿಂಟ್‌ಮೆಂಟಿನಲ್ಲಿ ಕೂಡ ಪ್ರೊಛಾನ್ಸಲರ್ ಮಾಡಬೇಕು. ಇದರ ಬಗ್ಗೆ ಹೆಚ್ಚು ಹೇಳುವುದು ಬೇಡ. ಮುಖ್ಯ ಮಂತ್ರಿಗಳು ಇದನ್ನು ಪುನಃ ಪರಿಶೀಲನೆ ಮಾಡಿ ಕೆಲವು ತಿದ್ದುಪಡಿಗಳನ್ನು ತರೋಣ ಎಂದು ಹೇಳಿರುವುದರಿಂದ ಇದು ಸರಿಯಾದುದಲ್ಲ ಎಂದು ಹೇಳಿ ಮುಂದಕ್ಕೆ ಹೋಗುತ್ತೇನೆ. ಇವತ್ತು ಬೋರ್ಡ್ ಆಫ್ ರಿಜಂಟ್ಸ್ ಏನು ಇದ್ದಾರೆ, ಆ ಬೋರ್ಡ್ ಆಫ್ ರಿಜಂಟ್ಸನ್ನು ತಾವು ರೀಕಾನ್‌ಸ್ಟಿಟ್ಯೂಟ್ ಮಾಡಲಿಕ್ಕೆ ಹೊರಟಿದ್ದೀರಿ. ಅಲ್ಲಿ ಇರತಕ್ಕ ಸಂಖ್ಯಾ ಬಲವನ್ನು ಹೆಚ್ಚು ಮಾಡಲಿಕ್ಕ ಹೊರಟಿದ್ದೀರಿ.

Clause 15 also provides for appointment of the Registrar by the Pro-Chancellor in consultation with the Vice-Chancellor. ಇಲ್ಲಿ ಏನಾಗುತ್ತದೆ ಅಂದರೆ ಒಂದು ಕಹಿ ಅನುಭವ ಬಂದಿದೆ. ಸರ್ಕಾರಿ ಅಧಿಕಾರಿಗಳ ಲೆಕ್ಕ ಹಿಡಿದರೆ, ಪುನಃ 3 ಜನ ಹೆಚ್ಚು ಮಾಡುವುದಕ್ಕೆ ಹೊರಟಿದ್ದೀರಿ. ಸರ್ಕಾರಿ ಅಧಿಕಾರಿಗಳು ಪ್ರೊ ಛಾನ್ಸಲರ್ ಯಾವ ನಿರ್ದೇಶನ ಕೊಡುತ್ತಾರೆ, ಆ ನಿರ್ದೇಶನಕ್ಕೆ ತಕ್ಕಂತೆ ತೆಗೆದುಕೊಳ್ಳುವ ಸನ್ನಿವೇಶ ಬರುತ್ತದೆ.

Then again in Clause 25(B)(i) five members not being Government servants are to be nominated by the Chancellor on the recommendation of the Pro-Chancellor from among progressive farmers. It will thus be seen that the Board of Regents cannot function independently without fear or favour. This is the crux of the problem. In the Housing Board affair the Minister prevailed upon some officers to toe his line or to resign. Why does Government want to increase the strength of officials in the Board of Regents?

ನೀವು ಬೋರ್ಡ್ ಆಫ್ ರಿಜಂಟ್ಸ್ ಕಂಟ್ರೋಲ್ ಮಾಡಬೇಕು, ತಾವು ಹೇಳಿದ ಹಾಗೆ ಕೆಲಸ ನಡೆಯಬೇಕು, ಮಂತ್ರಿಗಳ ಅಭಿಪ್ರಾಯದಂತೆ ಕೆಲಸ ನಡೆಯಬೇಕು, ಆ ಹಿನ್ನಲೆಯಿಂದ ಸಂಖ್ಯಾಬಲವನ್ನು ಹೆಚ್ಚಿಸುವುದಕ್ಕೆ ಹೊರಟಿದ್ದೀರಿ.

ಶ್ರೀ ಕೆ. ಎಚ್. ಪಾಟೀಲ್.—ಈಗ ಇದ್ದ ಬೋರ್ಡ್ ಆಫ್ ರಿಜೆಂಟ್ಸ್‌ನಲ್ಲಿ ಅಗ್ರಿಕಲ್ಚರಲ್ ರೆಪ್ರಸೆಂಟೆಟೀವ್ಸ್‌ಗೆ ಪ್ರಾತಿನಿಧ್ಯತೆ ಇದೆಯೋ? ಅಲ್ಲಿ ಅಗ್ರಿ ಕಲ್ಚರಿಸ್ಟ್ ರೆಪ್ರಸೆಂಟೆಟೀವ್ಸ್ ಒಬ್ಬರಾದರೂ ಇರುವುದಕ್ಕೆ ಅವಕಾಶ ಇದೆಯೋ? ಹಾಗಾದರೆ ಅಗ್ರಿಕಲ್ಚರ್ ಯೂನಿವರ್ಸಿಟಿಗಳಲ್ಲಿ ಅಗ್ರಿಕಲ್ಚರಿಸ್ಟ್ ಇರಬಾರದು ಎಂದು ತಮ್ಮ ಅಭಿಪ್ರಾಯವೇ? ಅಗ್ರಿಕಲ್ಚರಿಸ್ಟ್ ಇರಬೇಕು ಎಂದರೆ ಯಾವ ಮಾರ್ಗದಿಂದ ಅವರು ಬರಬೇಕು? ಈಗ ಇರುವ ಅಗ್ರಿಕಲ್ಚರ್ ಆಕ್ಟ್ ಪ್ರಕಾರ ಪ್ರೊಛಾನ್ಸಲರ್ ರೆಕಮಂಡೇಷನ್ ಇಲ್ಲದೆ ಅಪಾಯಿಂಟ್ ಮಾಡುತ್ತಾರೆಯೋ?

ಶ್ರೀ ಎಚ್. ಡಿ. ದೇವೇಗೌಡ.— ಈ ಬೋರ್ಡ್ ಆಫ್ ರೀಜೆಂಟ್ಸ್‌ನಲ್ಲಿ ವ್ಯವಸಾಯಗಾರನಿಗೆ ಪ್ರಾತಿನಿಧ್ಯ ಕೊಡುವುದಾದರೆ ನಾನು ಸ್ವಾಗತ ಮಾಡುತ್ತೇನೆ. ಡೀನ್ ಆಫ್ ಯೂನಿವರ್ಸಿಟಿ, ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್, ಚೀಫ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ಸ್, ಈ ಅಧಿಕಾರಿಗಳು ವ್ಯವಸಾಯಗಾರರೇ? ಬೇಕಾಗಿದ್ದರೆ ಈ ಅಧಿಕಾರಿಗಳ ಬದಲು ಇನ್ನೂ 3-4 ಜನರನ್ನು ವ್ಯವಸಾಯ ಗಾರರಾಗಿರುವಂಥಾವರನ್ನೇ ಅಪಾಯಿಂಟ್ ಮಾಡಿ. ಅದಕ್ಕೆ ನನ್ನ ಅಭ್ಯಂತರ ವೇನೂ ಇಲ್ಲ. ಹೆಚ್ಚು ಹೆಚ್ಚಾಗಿ ಈ ಅಧಿಕಾರಿ ವರ್ಗದವರನ್ನು ಮತ್ತು ವ್ಯವ ಸಾಯಗಾರರಲ್ಲದವರನ್ನು ಅಪಾಯಿಂಟ್ ಮಾಡುವುದು ಸರಿಯಲ್ಲ. ಆದುದರಿಂದ ವೈಯಕ್ತಿಕವಾಗಿ ನೀವು ತಂದಿರತಕ್ಕಂಥ ಪ್ರಪೋಸಲ್ಸ್ ಏನು ಇದೆಯೋ ಅದು ಸರಿಯಾಗಿಲ್ಲ ಎಂದು ನನ್ನ ವೈಯುಕ್ತಿಕ ಅಭಿಪ್ರಾಯವನ್ನು ತಿಳಿಸುತ್ತೇನೆ.

ಇನ್ನು ಇದರಲ್ಲಿ ಪ್ರೋಛಾನ್ಸಲರ್ ಎಂದು ಏನು ಹೇಳಿದ್ದೀರೋ ಅದಕ್ಕೆ ಆನ್ ದಿ ರೆಕಮೆಂಡೇಷನ್ ಆಫ್ ದಿ ಗೌರ್ನಮೆಂಟ್ ಎಂದು ಇಟ್ಟುಕೊಳ್ಳಿ. ಏತಕ್ಕೆಂದರೆ ಇದರಲ್ಲಿ ಕಾಂಟ್ರವರ್ಸಿ ಬರುತ್ತದೆ. ಪ್ರೋಛಾನ್ಸಲರ್‌ಗೆ ಅಧಿಕಾರ ಇದ್ದರೆ ಒಂದೊಂದು ಸಂದರ್ಭದಲ್ಲಿ ಅವರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳಬಹುದು. ಆದುದರಿಂದ ಗೌರ್ನಮೆಂಟ್ ಅಂತ ಇದ್ದರೆ ಅದು ಸರ್ಕಾರದ ಮೇಲೆ ಜವಾಬ್ದಾರಿ ಇರುತ್ತದೆ. ಆ ರೀತಿ ಸರ್ಕಾರದ ಮೇಲೆ ಜವಾಬ್ದಾರಿ ಇದ್ದರೆ ಒಳ್ಳೆಯದು. ಈ ತರಹದಲ್ಲಿ ಮಾರ್ಪಾಡು ಮಾಡಿಕೊಳ್ಳ ಬೇಕೆಂದು ಈ ಸಂದರ್ಭದಲ್ಲಿ ತಿಳಿಸಲು ಇಷ್ಟಪಡುತ್ತೇನೆ.

(ಶ್ರೀ ಎಚ್. ಡಿ. ದೇವೇಗೌಡ)

ಇನ್ನು ಸೆಕ್ಷನ್ 32ರಲ್ಲಿ ಪೆನ್‌ಷನ್ ಪ್ರಾವಿಡೆಂಟ್ ಫಂಡ್ ಇದನ್ನು ಡಿಲೀಟ್ ಮಾಡಿದ್ದೀರ. ಅದರ ಉದ್ದೇಶ ಏನು ಎಂದು ನಾನು ಕೇಳುತ್ತೇನೆ. ಇವತ್ತು ಇದರಲ್ಲಿ ರತಕ್ಕಂಥ ಪೆನ್‌ಷನ್ ಅಂಡ್ ಪ್ರಾವಿಡೆಂಟ್ ಫಂಡನ್ನು ಕಿತ್ತು ಹಾಕುವುದು ಸರಿಯಲ್ಲ ಎಂದು ಹೇಳುತ್ತೇನೆ.

ಇನ್ನು ಸೆಕ್ಷನ್ (33)ರಲ್ಲಿ ಅನ್ಯೂಯಲ್ ರಿಪೋರ್ಟನ್ನು ಈ ಸಭೆಯಲ್ಲಿ ಇಡುವುದಕ್ಕೆ ಪ್ರಯತ್ನ ಮಾಡಿದ್ದೀರ. ಇದಕ್ಕೆ ನನ್ನ ಅಭ್ಯಂತರವೇನೂ ಇಲ್ಲ, ಎಂದು ಈ ಸಂದರ್ಭದಲ್ಲಿ ತಿಳಿಸಲಿಚ್ಛಿಸುತ್ತೇನೆ.

In sub-section (6) of section 40 it is stated that :

"40. (6) A new Statute or addition to the Statute or any amendment or repeal of a Statute shall require the previous approval of Pro-Chancellor who may sanction, disallow or remit it for further consideration." ಇದು ಬಹಳ ಕಷ್ಟಕ್ಕೆ ಬಂದು ಹೋಯಿತು. ಅದರ ಪ್ರಕಾರ ಈ ವನ್ ಸ್ಟ್ಯಾಚೂಟ್ಸ್ ಅಮೆಂಡ್‌ಮೆಂಟ್ ರಿಪೀಲ್ ಆಗಬೇಕಾದರೂ ಸಹ ಪ್ರೋ ಛಾನ್ಸಲರ್‌ರವರ ಪ್ರೀವಿಯಸ್ ಅಪ್ರೂವಲ್ ಬೇಕು ಎಂದು ಹೇಳಿದ್ದೀರಾ ಅದು ಸರಿಯಾದುದಲ್ಲ. ಈ ಅಧಿಕಾರ ಲೆಜಿಸ್ಲೇಚರ್‌ಗೆ ಇರಬೇಕಾದ್ದು. Indirectly it means that even if the Legislature wants to amend the statute the prior approval of the Pro-Chancellor should be there. If he does not agree then there is no scope for any amendment. The way in which the Bill is drafted conveys that meaning and hence it is not correct.

SRI K. H. PATIL : Statute will have the value of an Act. It will be considered an Act itself. ಆದಕಾರಣ ಪ್ರೀವಿಯಸ್ ಅಪ್ರೂವಲ್ ಪಡೆದುಕೊಳ್ಳುವುದು ಉತ್ತಮ ಎಂದು ನಾವು ಅಭಿಪ್ರಾಯ ಪಟ್ಟುಕೊಂಡಿದ್ದೇವೆ.

SRI H. D. DEVE GOWDA : Let it come before the Legislature if any amendment is necessary.

SRI K. H. PATIL : I hope the hon. Member would agree that any statute either of a University or of a Corporation does not come before the Legislature since the time of the Legislature is so precious that it cannot go into those things. It will only be laid before the House.

SRI H. D. DEVE GOWDA : The House has got every right to question even the validity of the rules. Nobody can question that. I want that the Pro-Chancellor should have no authority whatsoever.

SRI K. H. PATIL : The statute framing right has been vested in the Board of Regeants. But they have to take the prior approval of the Pro-Chancellor.

SRI H. D. DEVE GOWDA : If there is any lacuna in the enactment let it come before the Legislature. The House should have the final say in the matter.

Then I come to section 45 which says :

> "45. Disputes as to constitution of University Authorities. — If any question arises regarding the interpretation of any provision of this Act, or of any Statute or Regulation, or as to whether a person has been duly appointed as, or is entitled to be a member of any authority of the University, the matter may be referred to the Pro-Chancellor and shall be so referred to him if six members of the Board so require. The Pro-Chancellor shall, after taking such advice as he deems necessary, decide the question; and his decision shall be final".

SRI K. H. PATIL : The framers intention is that the elected men should have a right and if you say that the Chancellor has the right I have already said we will

(ಶ್ರೀ ಕೆ. ಎಚ್. ಪಾಟೀಲ್)

consider it. Whatever rights vested in the Chancellor have been vested in the Pro-Chancellor. Are there any new sections introduced there ?

ಶ್ರೀ ಎಚ್. ಡಿ. ದೇವೇಗೌಡ : ಇದರಲ್ಲಿ ಯಾವ ಹೊಸ ಸೆಕ್ಷನ್ ಇಲ್ಲದೇ ಇದ್ದರೂ ಸಹ ಈ ಆಕ್ಟ್‌ನಲ್ಲಿರುವ ಅಧಿಕಾರವನ್ನು ಪ್ರೋ ಛಾನ್ಸಲರ್‌ಗೆ ಕೊಟ್ಟಿರುವುದು ಸರಿಯಲ್ಲ. ಇದನ್ನು ನೋಡಿ.

> "Interpretation of any provision of this Act, or of any Statute or Regulation, or as to whether a person has been duly appointed."

So, even in the appointments, the matter has to be referred to the Pro-Chancellor.

MADAM SPEAKER :—How much time still the hon. member requires ?

SRI H. D. DEVE GOWDA :—I will take another 10 or 15 minutes.

MADAM SPEAKER :—The hon. member may continue tomorrow. The House now stands adjourned to meet again at 1-00 P.M. tomorrow.

The House adjourned at Six of the Clock to meet again at One of the Clock on Friday, the 25th May, 1973.

WD 145—GEPC—550—13 2-74